# ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

## ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಆಗಸ್ಟ್-೨೦೦೫ ಸಂಚಿಕೆ-೧



## ನೀರಸಗೊಳ್ಳುತ್ತಿರುವ ಸ್ವಾತಂತ್ರ್ಯೋತ್ಸವ

**ಜನಪದ ವಿಚಾರ**
**ತಿಂಗಳ ವೈಚಾರಿಕ ಡೈಜಸ್ಟ್**

ಆಗಸ್ಟ್-೨೦೦೫
ಸಂಪುಟ-೬
ಸಂಚಿಕೆ-೧

ಸಂಪಾದಕ
**ಸುರೇಂದ್ರ ಕೌಲಗಿ**

ಸಲಹಾ ಸಮಿತಿ
**ಜನಪದ ಸೇವಾ ಟ್ರಸ್ಟ್**
**ಧರ್ಮದರ್ಶಿ ಮಂಡಳಿ**

**ಚಂದಾ ವಿವರ**
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

✆(08236)298754
e-mail-janapada@yahoo.com
**www.janapada.org**

# ಮೌನಯುದ್ಧ

ಗೀತೆ ಹುಟ್ಟು ಪಡೆದದ್ದು,
ಪಾರ್ಥ ಜಗದ ಪಾಠ ಕಲಿತದ್ದು
ಅಲ್ಲೇ ಕುರುಕ್ಷೇತ್ರದಲ್ಲಿ.
ಅವನ ಹಿಂಜರಿಕೆ, ಬಂಧುಗಳ ಕೊಲ್ಲಲೊಪ್ಪದ್ದು,
ರಥದ ಕುದುರೆಗಳ ಲಗಾಮು ಜಗ್ಗಿ ಹಿಡಿದು
ಕೃಷ್ಣ ಅವನ ಕಣ್ಣ ತೆರೆಸಿದ್ದೂ ಅಲ್ಲೇ.
ಅವನು ಎದುರಾಳಿ ಅತಿರಥರ, ಸೈನ್ಯದ
ಗಾತ್ರ ಕಂಡು ಹೆದರಿದವನಲ್ಲ, ಅವನ
ಮನ ಮುದುಡಿದ್ದು ಅವರ ಕುತಂತ್ರಗಳು ನೆನಪಾಗಿ.
ದುರ್ಯೋಧನನ ಅಸೂಯೆ ಹೆಡೆಯಾಡಿ, ಅವನ ಗರ್ವಕ್ಕೆ
ಭೀಷ್ಮ, ದ್ರೋಣ, ಶಲ್ಯಾದಿಗಳು ಕಟ್ಟು
ಬಿದ್ದವರಾಗಿ ಜೊತೆಗೂಡಿದ್ದು ಬೇಸರ ತಂದಿತ್ತವಗೆ.
ಯೋಚನೆ ಹರಿದಿತ್ತು ಪ್ರಶ್ನೆಗಳೊಟ್ಟಿಗೆ
ಭೀಮನಿರದಿದ್ದರೆ? ಅರಗಿನ ಮನೆಯಲ್ಲೇ
ಬೆಂದು, ಇಂದು ಗೀತೋಪದೇಶ ಬೇಕಾಗದಿತ್ತು.
ಧರ್ಮಜನಿರದಿದ್ದಲ್ಲಿ? ಕಪಟ ದ್ಯೂತಕ್ಕೆ
ತಲೆಬಾಗಿದ ಹೇಡಿತನ, ಹೆಂಡತಿಯ ಮಾನಭಂಗದ
ಅವಮಾನ ತಪ್ಪಿ, ನೇರ ಕೌರವನ ಎದೆ ಸೀಳಬಹುದಿತ್ತು.
ಒಂದು ವೇಳೆ ತಮ್ಮೊಂದಿಗೆ ಕೃಷ್ಣನಿಲ್ಲದಿದ್ದಲ್ಲಿ?
ಕೌರವನ ವಂಚನೆಗೆ, ಯುದ್ಧದ ಅನಿವಾರ್ಯತೆಗೆ
ತಮ್ಮಂತೆಯೇ ಧರ್ಮವೂ ದಯನೀಯ ಸೋಲು ಅನುಭವಿಸುವಂತಿತ್ತು.
ಹೊರಗೆ ಸೇನೆಗಳು ಸಜ್ಜಾಗಿರಲು, ಪಾರ್ಥನ
ಮನದಲ್ಲಿ ಯುದ್ಧ ಆರಂಭವಾಗಿತ್ತು
ಮೌನ ಸಂಘರ್ಷದಲ್ಲಿ ಅನಿಶ್ಚಯತೆ ಮೂಡಿ,
ಮುಖಾಮುಖಿಗೆ ಕುರುಕ್ಷೇತ್ರ ಸಾಕ್ಷಿಯಾಗಿತ್ತು.

*-ಎಂ.ಎಸ್.ವೆಂಕಟರಾಮಯ್ಯ.*

## ವಿಚಾರ ದೀಪ್ತಿ

ಕಾಲಬದಲಾಗಿದೆ. ನಮ್ಮ ಗ್ರಾಮೀಣ ಸಂಸ್ಕೃತಿ ತನ್ನದೇ ಸುಖ ಸಂತೋಷಕ್ಕೆ ಅಗತ್ಯವಾಗಿರುವಂತೆ ರೂಪಗೊಂಡಿತ್ತು. ಆಧುನಿಕತೆಯ ಹೊಸಗಾಳಿ ಬಂದು ಅದು ಹೋಗುವ ಸಂಭವ ಉಂಟು. ಬೆಳಿಗ್ಗೆ ಎದ್ದರೆ ಊರಿಗೂರೇ ರಾಗಿ ಬೀಸಿಕೊಂಡು ಹಾಡೋರು. ಈಗ ಅವೆಲ್ಲ ಇಲ್ಲ. ಮದುವೆಗೆ ಈಗ ಮೂರು ಗಂಟೆ ಸಾಕು ಅನ್ನೋ ಸ್ಥಿತಿ ಇದೆ. ಪ್ರಯತ್ನಪೂರ್ವಕವಾಗಿ ಉಳಿಸಬೇಕೆಹೊರತು ತಾನಾಗೇ ಉಳಿಯುವುದಿಲ್ಲ.

ಹೀಗೆ ಉಳಿಸಿಕೊಳ್ಳುವ ಪ್ರಯತ್ನವಾಗಿ ರೂಪುಗೊಳ್ಳುವ ಮ್ಯೂಸಿಯಂಗಳಲ್ಲಿ ಮಾತ್ರ ಜಾನಪದ ಉಳಿದರೆ ಸಾಕೆ? ಕೇವಲ ಮ್ಯೂಸಿಯಂ ಪೀಸ್ ಆಗಿ ಉಳಿದರೆ ಸಾಲದು. ಜಾನಪದದ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸಬೇಕು. ಮುಂದೊಂದು ದಿನ ಮೂಲಧಾಟಿಯ ಹಾಡುಗಳನ್ನೇ ಕೇಳಬೇಕು ಅನ್ನುವ ಮನೋಭಾವ ಜನರಲ್ಲಿ ಬರುತ್ತದೆ ಅನ್ನುವ ಆಶಾವಾದ ನನ್ನದು. ಈಗಾಗಲೇ ಜನ ಬೇರೆ ಬೇರೆ ಹಾಡು ಕೇಳಿ ಬೇಸರ ಆಗಿ ಮತ್ತೆ ಜಾನಪದಗೀತೆಯತ್ತ ವಾಲುತ್ತಿದ್ದಾರೆ. ನಗರದಲ್ಲಿಯೂ ಜಾನಪದಗೀತೆ ಒಪ್ಪಿಕೊಳ್ಳುವವರಿದ್ದಾರೆ. ಜನರನ್ನು ಆಕರ್ಷಿಸಲು ಹಲವಾರು ವಿಧಾನಗಳಿವೆ. ಬರಿ ಜಾನಪದ ಗೀತೆ ಹಾಡಿದರೆ ಜನ ಸೇರುವುದಿಲ್ಲ. ಹಾಗೆಯೇ ನಮ್ಮ ಆಧುನಿಕ ಗಾಯಕರು ಹಾಡಲು ಸಾಧ್ಯವೇ ಇಲ್ಲ. ಆದ್ದರಿಂದ ನನ್ನ ಹತ್ತಿರ ಇರುವ ೩೦೦೦ ಗಂಟೆ ಕೇಳಬಹುದಾದ ಮೂಲಗಾಯಕರಿಂದ ಸಂಗ್ರಹಿಸಿದ ಗೀತೆಗಳನ್ನು ಕ್ಯಾಸೆಟ್ ಮಾಡಿ ಜನರಿಗೆ ತಲುಪಿಸುವ ಉದ್ದೇಶ ಇದೆ.

ಅದರ ಜೊತೆಗೆ ಮೂಲಗಾಯಕರನ್ನು ಕರೆಸಿ ನಗರದ ಜನರ ಮಧ್ಯೆ ಹಾಡಿಸಿ ಪ್ರಚಾರ ಮಾಡ್ತಿದ್ದೇನೆ. ಇಷ್ಟಾದರೂ ಜಾನಪದ ಸಾಹಿತ್ಯ ಉಳಿತದೆ ಅಂತ ಹೇಳೋಕಾಗಲ್ಲ. ಬೀಸೋದು ಕುಟ್ಟೋದು ಹೋದ ಮೇಲೆ ಅವುಗಳಿಗೆ ಸಂಬಂಧಿಸಿದ ಹಾಡುಗಳು ಹೊರಟು ಹೋದವು. ಮುಂದಿನ ದಿನಗಳಲ್ಲಿ ಜಾನಪದ ಗೀತಸಾಹಿತ್ಯ ಕ್ಯಾಸೆಟ್‌ಗಳಲ್ಲಿ ಮಾತ್ರ ಉಳಿಯುತ್ತದೆಯೇ ಹೊರತು ನಿಜವಾಗಿ ಉಳಿಯುವುದಿಲ್ಲ ಒಟ್ಟಾರೆಯಾಗಿ ಭವಿಷ್ಯ ಆಶಾದಾಯಕವಾಗಿಲ್ಲ.

*-ಡಾ|| ಹೆಚ್.ಎಲ್.ನಾಗೇಗೌಡ.*

# ನೀರಸಗೊಳ್ಳುತ್ತಿರುವ ಸ್ವಾತಂತ್ರ್ಯೋತ್ಸವ

-ಸುರೇಂದ್ರ ಕೌಲಗಿ

*ಪ್ರತಿಯೊಂದು ಇತಿಹಾಸವು ಸಮಕಾಲೀನ ಇತಿಹಾಸವೇ ಆಗಿದೆ.*

*-ಇ.ಎಚ್.ಕಾರ್ಟ್*

ಇದು ಭಾರತದ ಐವತ್ತೆಂಟನೆ ಸ್ವಾತಂತ್ರ್ಯೋತ್ಸವ. ಆಗಸ್ಟ್ ೧೫ ಬಂದಿತೆಂದರೆ ಸ್ವಾತಂತ್ರ್ಯೋತ್ಸವದ ಎಣಿಕೆಗೆ ಕೊನೆಯಿಲ್ಲ. ಆದರೆ ದೇಶದ ನಿವಾಸಿಗಳ ಜೀವನದಲ್ಲಿ ಈ ಎಣಿಕೆ ಎಲ್ಲಿಯೋ ಒಂದು ದಿನ ಮುಕ್ತಾಯಗೊಳ್ಳುತ್ತದೆ. ಐವತ್ತೆಂಟನೆ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದ ಭಾರತೀಯ ತನ್ನ ಜೀವನದಲ್ಲಿ ಮುಂದಿನ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಾನೆಂದು ಹೇಳಲಾಗದು. ಏಕೆಂದರೆ ಎಲ್ಲರೂ ತಿಳಿದಿರುವಂತೆ ಮಾನವನ ಜೀವನ ಉದಕ ಉದ್ಬುದ. ನೀರಿನ ಮೇಲಿನ ಗುಳ್ಳೆಯಂತಿರುವ ಮಾನವನ ಜೀವನ ಯಾವ ಗಳಿಗೆಯಲ್ಲಾದರೂ ಒಡೆದು ಹೋಗಬಹುದು. ಆದರೆ ಇಂಥ ಮಿತಿ ದೇಶಕ್ಕೆ ಇಲ್ಲ. ಆದ್ದರಿಂದ ದೇಶದ ಸ್ವಾತಂತ್ರ್ಯೋತ್ಸವದ ಆಚರಣೆಯ ಎಣಿಕೆಗೆ ಕೊನೆಯಿಲ್ಲ.

ಸ್ವಾತಂತ್ರ್ಯೋತ್ಸವದ ವರ್ಷದಲ್ಲಿ ಬದುಕಿರುವ ದೇಶವಾಸಿಗಳಿಗೆ ಈ ಉತ್ಸವ ಉತ್ಸಾಹವರ್ಧಕವೋ, ಉತ್ಸಾಹಬಂಧಕವೋ ಆಗಲು ಸಾಧ್ಯ. ಭಾರತ ತನ್ನ ಮೊದಲ ಸ್ವಾತಂತ್ರ್ಯೋತ್ಸವವನ್ನು ೧೯೪೭ ಆಗಸ್ಟ್ ೧೪ ರ ಮಧ್ಯರಾತ್ರಿ ಆಚರಿಸಿದಾಗ ಇದ್ದ ಉತ್ಸಾಹವರ್ಧಕ ಪರಿಸ್ಥಿತಿ ಈಗ ೫೮ ನೇ ವರ್ಷದಲ್ಲಿ ಇದೆಯೇ ಎಂಬ ಪ್ರಶ್ನೆ ಮನಸಿನಲ್ಲೇಳುವುದು ಸಹಜ. ಈ ಪ್ರಶ್ನೆ ಒಂದು ರೀತಿಯಲ್ಲಿ ಸಿಂಹಾವಲೋಕನಕ್ಕೂ ದಾರಿಮಾಡಿಕೊಡಬಹುದು. ಸಹಜವಾಗಿಯೇ ಮನಸ್ಸು ೫೮ ವರ್ಷಗಳ ಹಿಂದೆ ಆಚರಿಸಲಾಗಿದ್ದ ಮೊದಲ ಸ್ವಾತಂತ್ರ್ಯೋತ್ಸವವನ್ನು ಜ್ಞಾಪಿಸಿಕೊಳ್ಳುತ್ತದೆ. ೧೯೪೭ ಆಗಸ್ಟ್ ೧೪ ರ ಮಧ್ಯರಾತ್ರಿ ಇಡೀ ವಿಶ್ವವೆಲ್ಲ ಮಲಗಿರಲು ಭಾರತ ಎಚ್ಚರವಾಗಿತ್ತು. ಮನಸ್ಸಿನಲ್ಲಿ ಅದೇನೋ ಒಂದು ಉತ್ಸಾಹ, ತವಕ. ಕಣ್ಣಲ್ಲಿ ಅದೇನೋ ಒಂದು ಕನಸು. ಭಾರತೀಯರ ಈ ಉತ್ಸಾಹ, ಈ ಕನಸಿಗೆ ಪ್ರಮುಖ ಕಾರಣ ಮನಸ್ಸಿನೊಳದಾಳದಲ್ಲಿದ್ದ ಒಂದು ಅನಿಸಿಕೆ. ಆಗಸ್ಟ್ ೧೫ ನೇ ತಾರೀಖಿನ ಸೂರ್ಯೋದಯದ ಪ್ರಥಮ ಕಿರಣಗಳು ದೇಶದ ಜೀವನವನ್ನು ಬದಲಾಯಿಸುವುದು; ದೇಶದ ಸಮಾಜದಲ್ಲಿ ಹೊಸ ಚೇತನ ಸಂಚರಿಸುವುದು; ೧೫೦-೨೦೦ ವರ್ಷಗಳ ದಾಸ್ಯದ ತನ್ನ ನೊಗವನ್ನು ದೇಶ ಪಕ್ಕಕ್ಕಿಟ್ಟು ಹೊಸ ರೆಕ್ಕೆಗಳನ್ನು ಮೂಡಿಸಿಕೊಂಡು ಯಾವುದೇ ಅಡೆತಡೆಗಳಿಲ್ಲದೆ ಸುಂದರ ನೀಲಗಗನದಲ್ಲಿ ವಿಹರಿಸುವುದು; ಎಲ್ಲ ಪ್ರಕಾರದ ಸಂಕೋಲೆಗಳನ್ನು ಬಿಸುಟು ದೇಶದ ಮಣ್ಣಿನ ಸಂಸ್ಕೃತಿಯನುಗುಣವಾಗಿ ಸಮಸ್ತರ ಉದ್ಧಾರದ ಹೊಸ

ದೃಷ್ಟಿಯನ್ನು ದೇಶ ಹೊಂದುವುದು, ಹೊಸ ಮಾರ್ಗ ಹಿಡಿಯುವುದು ಎಂಬುದೇ ಆ ಅನಿಸಿಕೆ. ಆ ಅನಿಸಿಕೆಗೆ ಆಗಸ್ಟ್ ೧೫ ರ ಮಧ್ಯರಾತ್ರಿಯಂದು ಸಂವಿಧಾನ ಸಭೆಗೆ ಸ್ವತಂತ್ರಭಾರತದ ಬಾವುಟವನ್ನು ಅರ್ಪಿಸುತ್ತಾ ಪ್ರಥಮ ಪ್ರಧಾನಿ ನೆಹರು ಕಾವ್ಯಮಯ, ಭಾವಮಯ ಸ್ವರೂಪವನ್ನು ಕೊಟ್ಟರು. ಅವರು ಉದ್ಗರಿಸಿದ ಒಂದೊಂದು ಮಾತೂ ಭಾರತೀಯರೆಲ್ಲರ ಭಾವನೆಗೆ ವಾಸ್ತವದ ಧ್ವನಿಯನ್ನು ಕೊಟ್ಟಿತು. ಅವರ ಅಂದಿನ ಭಾಷಣದಲ್ಲಿದ್ದ ಆಶಯಗಳೇ ಸ್ವಾತಂತ್ರ್ಯದ ಮೊದಲ ಉತ್ಸವವನ್ನು ನಭೂತೋ ನ ಭವಿಷ್ಯತಿ ಎಂಬ ರೀತಿಯಲ್ಲಿ ಆಚರಿಸಲು ಪ್ರೇರಣೆ ತಂದಿತ್ತು; ಅವರ ಭಾಷಣದ ಸಾರ ಇಂತಿತ್ತು: ಬಹಳ ಹಿಂದೆ ದೈವದೊಂದಿಗೆ ಒಪ್ಪಂದ ಮಾಡಿಕೊಂಡಿದ್ದೆವು. ಈಗ ಆ ಒಪ್ಪಂದವನ್ನು ಪುನರ್ಜೀವಿತಗೊಳಿಸುವ ಸಂಧರ್ಭ ಬಂದಿದೆ. ಪುನರ್ಜೀವಿತತೆ ಪೂರ್ಣವಷ್ಟೇ ಅಲ್ಲ, ಬಹಳ ಹೆಚ್ಚಾಗಿಯಷ್ಟೇ ಅಲ್ಲ ಪರಿಪೂರ್ಣವಾಗಿಯೇ ಮಾಡುವೆವು. ಮಧ್ಯರಾತ್ರಿಯ ಗಂಟೆ ಬಾರಿಸಿದಾಗ ವಿಶ್ವವೆಲ್ಲ ಮಲಗಿರುವ ಹೊತ್ತಿನಲ್ಲಿ ಭಾರತ ತನ್ನ ಜೀವಿತಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ಎಚ್ಚೆತ್ತುಗೊಳ್ಳುವುದು. ಇತಿಹಾಸದಲ್ಲಿ ಬಹಳ ಅಪರೂಪವಾಗಿ ಒಂದು ಘಳಿಗೆ ಬರುತ್ತದೆ; ಆ ಘಳಿಗೆಯಂದು ಹಳತಿನಿಂದ ಹೊಸದಕ್ಕೆ ಹೆಜ್ಜೆಯಿಡುತ್ತೇವೆ, ಆಗ ಒಂದು ಯುಗ ಮುಗಿಯುತ್ತದೆ. ದೀರ್ಘಕಾಲದಿಂದ ತುಳಿಯಲ್ಪಟ್ಟಿದ್ದ ರಾಷ್ಟ್ರದ ಆತ್ಮ ಧ್ವನಿಪಡೆಯುತ್ತದೆ. ಇಂಥ ಶ್ರೀಮತ್‌ಗಾಂಭೀರ್ಯದ ಘಳಿಗೆಯಲ್ಲಿ ನಾವು ಭಾರತದ ಸೇವೆಗಾಗಿ ಮತ್ತು ಆ ದೇಶದ ಜನತೆಯ ಸೇವೆಗಾಗಿ ಸಮರ್ಪಣೆಯ ಪ್ರತಿಜ್ಞೆ ಕೈಗೊಳ್ಳುತ್ತೇವೆ. ಈ ಸೇವೆ ಇನ್ನೂ ಹೆಚ್ಚಿನದಾದ ಮಾನವೀಯತೆಯ ವಿಶಾಲ ಉದ್ದೇಶವನ್ನೊಳಗೊಂಡಿರುತ್ತದೆ. ಭಾರತದ ಸೇವೆಯೆಂದರೆ ಬಳಲುತ್ತಿರುವ ಕೋಟ್ಯಾವಧಿ ಭಾರತೀಯರ ಸೇವೆ; ಬಡತನ, ಅಜ್ಞಾನ, ರೋಗ-ರುಜಿನ ಮತ್ತು ಅವಕಾಶಗಳಲ್ಲಿಯ ಅಸಮಾನತೆಯ ಮುಕ್ತಾಯ. ನಮ್ಮ ಶತಮಾನದ ಮಹಾಪುರುಷನ ಮಹತ್ವಾಕಾಂಕ್ಷೆ ಪ್ರತಿಂಯೊಬ್ಬನ ಕಣ್ಣೀರನ್ನು ಹೋಗಲಾಡಿಸುವುದಾಗಿತ್ತು. ಇದು ನಮ್ಮ ಸಾಮರ್ಥ್ಯಕ್ಕೆ ಮೀರಿರುವುದಾಗಿರಬಹುದು ಆದರೆ ಎಲ್ಲಿಯವರೆಗೆ ಕಣ್ಣೀರು ಮತ್ತು ಬಳಲಿಕೆ ಇರುತ್ತದೋ ಅಲ್ಲಿಯವರೆಗೆ ನಮ್ಮ ಕೆಲಸಕ್ಕೆ ಕೊನೆಯಿಲ್ಲ. ಒಂದು ಅರ್ಥದಲ್ಲಿ ಈ ಮಾತು ನವಭಾರತದ ನಿರ್ಮಾಣದ ಮಾರ್ಗಸೂಚಿಯಾಗಿತ್ತು. ಈ ಹೊಂಗನಸೇ ಭಾರತೀಯರನ್ನು ೧೫ ರ ರಾತ್ರಿ ಪುಳಕಿತಗೊಳಿಸಿತ್ತು. ಆಕಾಶದೆದೆ ಬಿರಿಯುವಂತೆ ಭಾರತ ಮಾತೆಗೆ ಜೈಕಾರ ಹಾಕಲಾಗಿತ್ತು. ಎಲ್ಲೆಲ್ಲೂ ರಾಷ್ಟ್ರಧ್ವಜ ಎತ್ತರೆತ್ತರಕ್ಕೆ ಹಾರಿತ್ತು. ರಾಷ್ಟ್ರಧ್ವಜದ ಗೌರವವೆ ದೇಶದ ಗೌರವವೆಂದು ಭಾವಿಸಲಾಗಿತ್ತು. ಯಾವ ರೀತಿಯಲ್ಲೂ, ಯಾವ ಕಾರಣಕ್ಕಾಗಿಯೂ ರಾಷ್ಟ್ರಧ್ವಜದ ದುರ್ಬಳಕೆಯನ್ನಾಗಲಿ, ಅವಮಾನವನ್ನಾಗಲಿ ಭಾರತೀಯರು ಸಹಿಸುವ ಮನೋಭಾವದಲ್ಲಿರಲಿಲ್ಲ. ಅದೇ ರೀತಿ ರಾಷ್ಟ್ರದ

ಐಕ್ಯತೆಗೆ ವಿರೋಧವಾದ ಯಾವ ಮಾತನ್ನೂ ಸಹಿಸುವ ಸ್ಥಿತಿಯಲ್ಲಿರಲಿಲ್ಲ. ಎಲ್ಲೆಲ್ಲಿಯೂ ಜೈಹಿಂದ್ ದ ಉದ್ಘೋಷವೇ ಮೊಳಗುತ್ತಿತ್ತು. ಮೊದಲ ಸ್ವಾತಂತ್ರ್ಯದ ಆಚರಣೆಯ ಕಾಲದಲ್ಲಿ ಇದ್ದ ಮಕ್ಕಳು ಯಾವುದೊ ಒಂದು ಸುಂದರ ಲೋಕಕ್ಕೆ ತಾವು ಹೋಗುತ್ತಿದ್ದೇವೆ ಎಂಬ ಭಾವನೆಗೆ, ಅದು ಪೂರ್ಣವಾಗಿ ಅರ್ಥವಾಗಿರದಿದ್ದರೂ ಒಳಗಾಗಿದ್ದರು. ದೇಶದ ವಿಭಜನೆಯಾಗಿದೆಯೆಂಬುದು ಮಾತ್ರ ಗೊತ್ತಾಗುತ್ತಿತ್ತು. ವಿಭಜನೆಯ ದುರಂತಗಳ ಚಿತ್ರಗಳು ಪತ್ರಿಕೆಗಳಲ್ಲಿ ಕಣ್ಣಿಗೆ ರಾಚುವಂತೆ ಗೋಚರಿಸುತ್ತಿದ್ದವು; ಆಕಾಶವಾಣಿ ಕರ್ಣಕಠೋರವಾದ ಸುದ್ದಿಗಳನ್ನು ಬಿತ್ತರಿಸುತ್ತಿತ್ತು. ಈ ಎಲ್ಲ ಎದೆ ಒಡೆಯುವ ವಾಸ್ತವಿಕತೆಯ ಅಂಧಃಕಾರದಲ್ಲೂ ಅಂದಿನ ದೇಶಪ್ರೇಮಿ ನಾಯಕರ, ತ್ಯಾಗಿ ನಾಯಕರ ಭಾಷಣಗಳಿಂದಾಗಿ ನವ ಅರುಣೋದಯದ ಭರವಸೆಯಲ್ಲಿ ಭಾರತೀಯರೆಲ್ಲ ಆ ಆಗಸ್ಟ್ ೧೪ ರ ಇಡೀ ರಾತ್ರಿಯನ್ನು ನಿದ್ರೆಯಿಲ್ಲದೆ ಕಳೆದರು. ಈ ಭರವಸೆಯನ್ನು ಹೃದಯದಲ್ಲಿ ಬೆಚ್ಚಗಿಟ್ಟುಕೊಂಡು ಬಂದು ೫೮ ವರ್ಷಗಳು ಕಳೆದುಹೊದವು. ಅಂದಿನಿಂದ ಇಂದಿನವರೆಗೆ ಹರಿದು ಹೋದ ಕಾಲ ಪ್ರವಾಹದ ಹೊಡೆತಕ್ಕೆ ಸಿಕ್ಕಿ ಆ ಆಸೆಗಳು, ಆ ಭರವಸೆಗಳು, ಆ ನಿರೀಕ್ಷೆಗಳು ತುಂಡು ತುಂಡಾಗಿವೆ. ಪುನಃ ಸೇರಿಸಲಾಗದಷ್ಟು ತುಣುಕುಗಳಾಗಿವೆ. ಆಗ ಕೆಂಪುಕೋಟೆಯ ಮೇಲೆ ಹಾರಿದ್ದ ರಾಷ್ಟ್ರಧ್ವಜ ಇಂದು ದೇಹದ ಒಳ ಉಡುಪಾಗಿದೆ; ಆಗ ಶುದ್ಧ ಖಾದಿಯಿಂದ ತಯಾರಾಗುತ್ತಿದ್ದ ರಾಷ್ಟ್ರಧ್ವಜ ಇಂದು ಪ್ಲಾಸ್ಟಿಕ್ ಕಾಗದದ್ದಾಗಿದೆ. ಆಗ ಇಡೀ ಭಾರತ ಒಗ್ಗಟ್ಟಿನ ಮನೋಭಾವದಿಂದ ಆಚರಿಸಿದ್ದ ಸ್ವಾತಂತ್ರ್ಯೋತ್ಸವವನ್ನು ಇಂದು ವಿಘಟನೆಯ ಮನೋಭಾವನೆಯಿಂದ ಆಚರಿಸಲಾಗುತ್ತಿದೆ. ಬಾಯಿಂದ ಜೈಹಿಂದ್ ಎಂಬ ಘೋಷಣೆ ಹೊರಬರುತ್ತದೆ ಆದರೆ ಹೃದಯದಲ್ಲಿ ಮತ್ತು ಮಸ್ತಿಷ್ಕದಲ್ಲಿ ಅಹಿಂದ್ ಎಂಬ ಭಾವನೆ ಇರುತ್ತದೆ; ಆಗ ರಾಷ್ಟ್ರಗೀತೆಯನ್ನು ಹೇಳುವಾಗ ದೇಹದ ರೋಮವೆಲ್ಲ ಸ್ಪಂದಿಸುತ್ತಿತ್ತು. ಈಗ ಅದು ಕಾಟಾಚಾರದ ಸಂಗತಿಯಾಗಿದೆ. ಬಾಯಿಂದ ರಾಷ್ಟ್ರಗೀತೆಯನ್ನು ಹೇಳುವುದಕ್ಕಿಂತ ವಾದ್ಯದಲ್ಲಿ ನುಡಿಸುವುದು ಹೆಚ್ಚು ಅನುಕೂಲಕರವೆಂದು ಭಾವಿಸಲಾಗುತ್ತಿದೆ. ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳಲ್ಲಿ ಯಾವ ಬಣ್ಣದ ಭಾಗ ಮೇಲಿರಬೇಕೆಂಬುದನ್ನೇ ತಿಳಿಯದ ಜನ ಅಪಾರ ಸಂಖ್ಯೆಯಲ್ಲಿದ್ದಾರೆ.

ಐವತ್ತೆಂಟನೆ ಸ್ವಾತಂತ್ರ್ಯೋತ್ಸವದ ನೀರಸತೆಗೆ ಇನ್ನೊಂದು ಪ್ರಮುಖ ಕಾರಣವೇನೆಂದರೆ ಪ್ರಧಾನಿ ಮನಮೋಹನ್ ಸಿಂಗ್ ಈಗಷ್ಟೆ ಅಮೇರಿಕಾಕ್ಕೆ ಹೋಗಿ ಭಾರತದ ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬೀಗದ ಕೈಯನ್ನು ಬುಷ್ ಮಹಾಶಯರಿಗೆ ಒಪ್ಪಿಸಿ ಬಂದಿದ್ದಾರೆ. ಇದಕ್ಕೂ ಮೊದಲು ನರಸಿಂಹರಾಯರು ಭಾರತದ ಆರ್ಥಿಕ ಪ್ರಗತಿಯ ಬೀಗದ ಕೈಯನ್ನು ಅಮೇರಿಕಾಕ್ಕೂ ಮತ್ತು ಇತರ

ಐರೋಪ್ಯ ದೇಶಗಳಿಗೆ ಒಪ್ಪಿಸಿಕೊಂಡು ಬಂದಾಗಿತ್ತು, ಇದಕ್ಕೂ ಮೊದಲು ಚಂದ್ರಶೇಖರ್ ದೇಶದ ಬಂಗಾರವನ್ನು ಹೊರದೇಶಗಳಲ್ಲಿ ಒತ್ತೆ ಇಟ್ಟು ಸಾಲ ತಂದಾಗಿತ್ತು. ಸ್ವಾತಂತ್ರ್ಯೋತ್ಸವದ ಎಣಿಕೆ ಒಂದರಿಂದ ಮುಂದೆ ಮುಂದಕೆ ಸಾಗಿದಂತೆ ದೇಶದ ಸ್ವಾತಂತ್ರ್ಯದ ಅಪಹರಣವಾಗುತ್ತಾ ನಡೆದಿದೆ. ಐವತ್ತೆಂಟನೆ ಸ್ವಾತಂತ್ರ್ಯೋತ್ಸವದ ಆಚರಣೆಯ ವೇಳೆಯಲ್ಲಿ ಭಾರತ ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಪೂರ್ಣವಾಗಿ ಕಳೆದುಕೊಂಡಿದೆ; ಭೌದ್ಧಿಕ ಆಸ್ತಿಯ ಮೇಲಿನ ಹಕ್ಕನ್ನು ಕಳೆದುಕೊಂಡಿರುತ್ತದೆ. ದೇಶದಾದ್ಯಂತ. ರಾಜಕೀಯ–ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸ್ಥಿರತೆ ಕಾಣಿಸಿಕೊಳ್ಳುತ್ತಿದೆ. ಈ ಎಲ್ಲ ಪ್ರಕಾರದ ನಕಾರಾತ್ಮಕ ಬೆಳವಣಿಗೆಗಳನ್ನು, ಇದಕ್ಕೂ ಹೆಚ್ಚು ನಕಾರಾತ್ಮಕ ಪರಿಣಾಮವನ್ನು ಮಾಡಬಲ್ಲ ಹುಚ್ಚು ಮನಸ್ಸಿನ ಹತ್ತು ಮುಖದ "ಅಭಿವೃದ್ಧಿ" ಎಂಬ ಹೊದಿಕೆಯಲ್ಲಿ ಮುಚ್ಚುವ ದೊಡ್ಡ ಹುನ್ನಾರ ನಡೆಯುತ್ತಿರುವುದು ದುಃಖಾಂತ ನಾಟಕದ ಬರಹವೇ ಆಗಿದೆ.

ಇದುವರೆಗೆ ಕೇಂದ್ರದಲ್ಲಿ ಹತ್ತಾರು ಸರ್ಕಾರಗಳು ಬಂದು ಹೋದರೂ ಭಾರತ ದೇಶ ಹಳ್ಳಿಗಳಲ್ಲಿದೆ ನಗರಗಳಲ್ಲಿಯಲ್ಲ ಎಂಬ ಸಂಗತಿ ತಲೆಗೆ ಹೋಗಿಲ್ಲ; ಭಾರತದ ಅಂತಸತ್ವ ಭಾರತೀಯ ಭಾಷೆಗಳಲ್ಲಿದೆಯೇ ಹೊರತು ಇಂಗ್ಲೀಷ್‌ನಲ್ಲಿಯಲ್ಲ ಎಂಬ ಸಂಗತಿ ತಲೆಗೆ ಹೋಗಿಲ್ಲ; ವೈವಿಧ್ಯತೆಯಿಂದ ಕೂಡಿರುವ ಭಾರತೀಯ ಸಮಾಜದಲ್ಲಿ ಪ್ರಜಾಪ್ರಭುತ್ವ ಅತ್ಯಂತ ವಿಕೇಂದ್ರಿತವಾಗಿರಬೇಕು ಮತ್ತು ಬಹುಸಂಖ್ಯಾ ಮತ, ಅಲ್ಪಸಂಖ್ಯಾ ಮತವೆಂಬ ಮಾಯಾಲೋಕದಿಂದ ಹೊರಬರಬೇಕೆಂಬ ಸಂಗತಿ ತಲೆಗೆಹೋಗಲಿಲ್ಲ, ವಿದೇಶಿಯರ ಆಡಳಿತ ಕೊನೆಗೊಂಡು ಸ್ವದೇಶಿಯರ ಆಡಳಿತ ಪ್ರಾರಂಭವಾಗಿದೆಯೆಂಬುದರ ಸಾಕ್ಷಿಯಾಗಿ ಉಪ್ಪಿನಮೇಲಿನ ತೆರಿಗೆ ಪೂರ್ಣ ರದ್ದಾಗಿ ಅಂಗಡಿಗಳಲ್ಲೆಲ್ಲ ಉಪ್ಪು ಉಚಿತವಾಗಿ ಸಿಗಬೇಕೆಂಬ ರಾಷ್ಟ್ರಪಿತನ ಆದೇಶವನ್ನು ಜಾರಿಗೆ ತರಬೇಕೆಂಬ ಸಂಗತಿ ತಲೆಗೆ ಹೋಗಲಿಲ್ಲ. ಬದಲಿಗೆ, ಉಪ್ಪನ್ನು ಇಡೀ ಸಮಾಜದ ಶೋಷಣೆಯ ಸಾಧನವನ್ನಾಗಿ ಪರಿವರ್ತಿಸಲಾಯಿತು. ದೊಡ್ಡ ಉದ್ಯೋಗಗಳ ಬದಲಾಗಿ ಮನೆಮನೆಯಲ್ಲಿ, ಹಳ್ಳಿ ಹಳ್ಳಿಗಳಲ್ಲಿ ನಡೆಯುವ ಉದ್ಯೋಗವನ್ನು ಪ್ರಾರಂಭಿಸಿ ದೇಶದಲ್ಲಿರುವ ನಿರುದ್ಯೋಗ, ಬಡತನ, ರೋಗ ರುಜಿನ, ನಗರವಲಸೆ ಇತ್ಯಾದಿ ಸಮಸ್ಯೆಗಳನ್ನು ಹೋಗಲಾಡಿಸಬೇಕೆಂಬ ನೀತಿ ತಲೆಗೆ ಹೋಗಲಿಲ್ಲ. ಇಂದು ಜನಸಾಮಾನ್ಯನಿಗೆ ಮೊಟ್ಟಮೊದಲು ಬೇಕಿರುವುದು ಅನ್ನ ಮತ್ತು ಉದ್ಯೋಗವೇ ಹೊರತು ಕಂಪ್ಯೂಟರ್ ಅಲ್ಲ ಎಂಬ ಸಂಗತಿ ತಲೆಗೆ ಹೋಗಲಿಲ್ಲ. ವಿಪ್ರೋ, ಇನ್‌ಫೋಸಿಸ್, ಅಂಬಾನಿ ಮತ್ತು ಇತರ ಜಾಗತಿಕ ಸಂಸ್ಥೆಗಳ ಕೋಟಿ ರೂಪಾಯಿಗಳ ಲಾಭವನ್ನು ಪ್ರದರ್ಶಿಸುವ ಬದಲಾಗಿ ಸಾಮಾನ್ಯ ಭಾರತೀಯರಾದ ನೂಲುಗಾರರು, ನೇಕಾರರು, ಉಳುಮೆಗಾರರು, ಇವರ ವಾರ್ಷಿಕ ಆದಾಯದ ಹೆಚ್ಚಳವನ್ನು ಕಡೆ ಪಕ್ಷ ಒಂದು ಸಾವಿರ ರೂಪಾಯಿಗಳಷ್ಟಾದರೂ ಹೆಚ್ಚಿಸಬೇಕೆಂಬ ಧೈರ್ಯ ತಲೆಗೆ ಹೋಗಲಿಲ್ಲ.

ಇವೆಲ್ಲಾ ಮಾತುಗಳು ಭಾರತದೊಂದಿಗೆ ಸ್ವಾತಂತ್ರ್ಯಪಡೆದ ಪಾಕಿಸ್ತಾನಕ್ಕೂ ಅನ್ವಯಿಸುತ್ತದೆ. ಮೂಲ ಮತ್ತು ಶಾಶ್ವತ ಆರ್ಥಿಕ ಅಭಿವೃದ್ಧಿಗಿಂತ ಶಸ್ತ್ರಾಸ್ತ್ರಗಳ ಅಭಿವೃದ್ಧಿಗಾಗಿ ಹಣದ ಹೊಳೆ ಹರಿಯಲು ಈ ಎರಡು ದೇಶಗಳ ಇಂದಿನ ಮೂರ್ಖ ನಾಯಕರು ಕಾರಣರಾಗಿದ್ದಾರೆ. ಜೊತೆಗೆ ಈ ಎರಡೂ ದೇಶಗಳ ಸೂತ್ರಧಾರನಾಗಿರುವ ಅಮೆರಿಕದ ಅಧ್ಯಕ್ಷ ಇನ್ನೂ ಹೆಚ್ಚು ಕಾರಣವಾಗಿದ್ದಾನೆ.

ದೇಶದ ಎಲ್ಲಾ ಇಪ್ಪತ್ತೆಂಟು ರಾಜ್ಯಗಳೂ ರಾಜಕೀಯ ಅಸ್ಥಿರತೆಯಲ್ಲಿ ತೊಳಲಾಡುತ್ತಿವೆ.

ಇಂದು ಆಚರಿಸಲಾಗುತ್ತಿರುವ ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಭಾಗವಹಿಸುತ್ತಿರುವವರು ಯಾರು? ಏನೂ ಅರಿಯದ ಶಾಲಾಬಾಲಕರು, ಪ್ರಚಾರಪ್ರಿಯ ರಾಜಕಾರಣಿಗಳು, ಕರ್ತವ್ಯಬದ್ಧರಾದ ಸಶಸ್ತ್ರ ಸಿಪಾಯಿಗಳು, ಅನ್ನದ ಋಣ ಇರುವ ಸರ್ಕಾರಿ ನೌಕರರು ಮಾತ್ರ. ರೈತರಾಗಲಿ, ಶ್ರಮಪಡುವ ವರ್ಗವಾಗಲಿ, ವ್ಯಾಪಾರಿಗಳಾಗಲಿ, ಗೃಹಿಣಿಯರಾಗಲಿ, ಬುದ್ಧಿಜೀವಿಗಳಾಗಲಿ, ಸಾಮಾನ್ಯಜನರಾಗಲಿ ಭಾಗವಹಿಸುತ್ತಿಲ್ಲ. ಜನರಿಂದ ದೂರವಾಗುತ್ತಾ ಹೋಗುತ್ತಿರುವ ಉತ್ಸವವಾಗಿದೆ ಸ್ವಾತಂತ್ರ್ಯದಿನಾಚರಣೆ. ಇಂಥ ಪರಿಸ್ಥಿತಿಯನ್ನು ನಮ್ಮ ದೇಶದ ನಾಯಕರು ತಮ್ಮ ಚರ್ಯೆ, ನೀತಿ, ಸಂಕುಚಿತತೆಯಿಂದ ಉಂಟುಮಾಡುತ್ತಾರೆಂಬ ಸೂಚನೆಯನ್ನು ತಮ್ಮ ಒಳಗಣ್ಣಿನಿಂದ ತಿಳಿದಿದ್ದ ಮಹಾತ್ಮ ಗಾಂಧಿ ೧೯೪೭ ಆಗಸ್ಟ್ ೧೫ ರ ಮೊದಲ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಿರಲಿಲ್ಲ. ಈ ಘಟನೆಯನ್ನು ನೆನೆದು ರಾಷ್ಟ್ರಕವಿ ಕುವೆಂಪುರವರ ಹೃದಯದಿಂದ ಬಂದ ನೊಂದ ನುಡಿ ಸ್ಮರಣೀಯವಾಗಿದೆ:
"ಹೆಜ್ಜೆಹೆಜ್ಜೆಯನಿಡಿಸಿ ಕೈಹಿಡಿದು ನಡೆಗಲಿಸಿ, ಬಿಡುಗಡೆಗೆ ತಂದ ಆ ತಂದೆಯೆಲ್ಲಿ?
ಎಲ್ಲಿ ಓ ಅವನೆಲ್ಲಿ? ನಿಚ್ಚವೂ ನಮ್ಮೆದೆಯ ನಂಜೀಂಟುವಾ ನೀಲಕಂಠನೆಲ್ಲಿ?"
ಗಾಂಧೀಜಿಯ ಆ ಕೃತ್ಯ ಅಂದು ಬೇರೆ ಕಾರಣಗಳಿಂದ ಅನಿವಾರ್ಯವಾಗಿ ನಡೆದುಹೋಗಿರಬಹುದು.

ಆದರೆ ಇಂದು ಸ್ವಾತಂತ್ರ್ಯೋತ್ಸವದಿಂದ ಜನರು ವಿಮುಖರಾಗಿ ಆ ಉತ್ಸವ ನೀರಸವಾಗಲು ಜನಸಾಮಾನ್ಯರಿಗೆ ತಮ್ಮದೆ ಆದ ಸಮಸ್ಯೆಗಳಿವೆ, ಅವರ ಜೀವನವನ್ನು ಚುಚ್ಚುವ ಮುಳ್ಳುಗಳಿವೆ. ಇವೆಲ್ಲವುಗಳ ನಿವಾರಣೆಯಾದಾಗ ಮುಂಬರುವ ವರ್ಷಗಳಲ್ಲಿಯ ಸ್ವಾತಂತ್ರ್ಯೋತ್ಸವ ನಿತ್ಯೋತ್ಸವದ ಸಂಭ್ರಮ ಕಂಡೀತು. ಅಂಥ ಸಂಭ್ರಮಕ್ಕಾಗಿ ಇಂದಿನ ಹಿರಿಯರು ಆಶಿಸೋಣ.

* * *

# ಮಾಯವಾಯಿತು ಆಕಾಶ!!

*-ವೈದೇಹಿ*

ಅಲ್ಲಿ ಆಕಾಶ ಎಷ್ಟಗಲ ಕಾಣುತ್ತಿತ್ತು! ಅದು ನಾವು ಮನೆ ಕಟ್ಟಿದ ಹೊಸತು. ಅಷ್ಟು ಪ್ರದೇಶದಲ್ಲಿ ನಮ್ಮದೊಂದೇ ಮನೆಯಿತ್ತು. ಹೊರಗೆ ಎಲ್ಲಿ ಕಂಡರೂ ಆಕಾಶವೇ. ಮಳೆಯಾಕಾಶ, ಬಿಸಿಲಾಕಾಶ, ಮುಗಿಲಾಕಾಶ, ನೀಲಾಕಾಶ, ವರ್ಣಾಕಾಶ, ಪೂರ್ವಾಕಾಶ, ಪಡುಆಕಾಶ, ದಕ್ಷಿಣ ಉತ್ತರ ಆಕಾಶ, ಆಕಾಶ ಆಕಾಶ. ಸೂರ್ಯ ಮೂಡುವಾಗ ಮುಳುಗುವಾಗ ಆ ದಿಕ್ಕುಗಳು ಉಪಮೆಗಳ ಹಂಗು ತೊರೆದು ತದೇಕವಾಗಿ ಮೆರೆಯುವವು. ಮಾತಾಡಿದರೆ ಮಾತಾಡಿದಂತೆ, ಮೌನವಾದರೆ ಮೌನವಾದಂತೆ, ಒಟ್ಟು ಮನಸನರಿತ ಮನಸಿನಂತೆ ಇರುವವು.

ಅಕ್ಕಪಕ್ಕದ ಸೈಟುಗಳೆಲ್ಲ ಆಗ ಖಾಲಿಯಿದ್ದುವು. ಅಲ್ಲಿ ನಾನಾ ತರಹದ ಬೇಕಾದ ಬೇಡವಾದ ಹುಲ್ಲುಗಳು, ಹಸಿರಾಗಿ, ಹೂ ಬಿಟ್ಟು, ಕರಟಿ ಕುಸಿದು ಮಣ್ಣಾಗಿ ಮತ್ತೆ ಎದ್ದು ಬರುತ್ತ, ಮೇಲಿರುವ ಆಕಾಶದ ಗುಣಕ್ಕೆ ಅನುಗುಣವಾಗಿ ಜನ್ಮಚಕ್ರದಲ್ಲಿ ವರ್ಷವರ್ಷವೂ ಸುತ್ತುತ್ತಿದ್ದುವು. ಬುಗರಿ, ಮುತ್ತುಗ ಇತ್ಯಾದಿ ಮರಗಳು ವಿರಳವಾಗಿ ಆದಿಕಾಲದಿಂದಲೂ ಅದು ತಮ್ಮದೇ ಜಾಗವೆಂಬಂತೆ ಇದ್ದುಕೊಂಡಿದ್ದವು. ಬುಗರಿಮರವನ್ನು ಹತ್ತಿ ಹಣ್ಣು ಕೊಯ್ಯುವ ಚಿಣ್ಣರು. ಕೆಂಪು ಹಸಿರು ಕಾಯಿಗಳನ್ನು ಅವು ಕೊಯ್ಯುತಿದ್ದರೆ ಆ ಮರ ಕಂದನಿಗೆ ಎದೆ ಹಾಲು ಕುಡಿಸುತ್ತಿರುವ ತಾಯಿಯಂತೆ ಕಾಣುತ್ತಿತ್ತು; ಸಮಾಧಾನವಾಗಿ ಮೆಲ್ಲ ತಗ್ಗುದನಿಯಲ್ಲಿ ಹಾಡೊಂದನ್ನು ಗಾಳಿಯ ಶ್ರುತಿಯೊಂದಿಗೆ ತೂಗಿಕೊಂಡಂತೆ. ಒಮ್ಮೆ ನಾನು ಮರದ ಮೇಲಿನ ಮಕ್ಕಳೊಡನೆ ಕೇಳಿದೆ; ಅಲ್ಲಿಂದ ಆಕಾಶ ಹೇಗೆ ಕಾಣುತ್ತದೆ? ಅವು ಸುಮ್ಮನೆ ನಕ್ಕು, ಬುಗುರಿಹಣ್ಣು ಬೇಕೆ ನಿಮಗೆ? ತಡೆಯಿರಿ, ಕೊಡುತ್ತೇವೆ- ಎಂದವು.

ಹೀಗಿರುತ್ತ ಒಂದು ದಿನ ತುಸು ಆಚೆಗಿನ ಸೈಟಿನಲ್ಲಿ ಬೆಳೆದ ಹುಲ್ಲನ್ನು ಯಾರೋ ಸುಡಿಸಿದರು. ಮರಗಳನ್ನು ಕಡಿಸಿದರು. ಹಕ್ಕಿಗಳು ಆಹಾರ ಹುಡುಕುತ್ತ ಗೂಡು ಬಿಟ್ಟು ಹಾರಿಹೋದ ಹೊತ್ತದು. ಸಂಜೆ ಅವು ಬರುವಾಗ ಅವುಗಳ ಮನೆ ಇಲ್ಲ! ಆ ಸೈಟು ಸೇಲಾಗಿದೆ. ಅಲ್ಲೊಂದು ಮನೆಯಾಗುತ್ತಿದೆ ಎಂದು ತಿಳಿಯಿತು. ಹಕ್ಕಿಗಳು ಏನಂದುಕೊಳ್ಳಬಹುದು? ಕಕ್ಕಾಬಿಕ್ಕಿಯಾಗಿ ಅತ್ತಿತ್ತ ನೋಡಿ, "ಮನೆಗಾಗಿ ಮನೆ ಹೋಯ್ತು" ಎನ್ನಲೂ ತೋರದವು, ಹಾರಿ ಹೋಗಬಹುದು. ಎಲ್ಲಿಗೆ, ಯಾರೊಡನೆ ದೂರಲು?... [ಹಿಂದೊಮ್ಮೆ, ಬಿರುಗಾಳಿ ಬೀಸಿ ಗೂಡಿನ ಮೇಲೆ ಮರಬಿದ್ದಾಗ ಪುರುಲೆ ಹಕ್ಕಿಯೊಂದು "ಮರವನ್ನು ಎತ್ತಿ ತನ್ನ ಗೂಡನ್ನು ಉಳಿಸಿಕೊಡಿರೆ"ಂದು ಚೀರುತ್ತ ಊರೆಲ್ಲ ತಿರುಗಿತ್ತಲ್ಲವೆ ಪಾಪ.] ಬಿಡು, ಅದೆಲ್ಲ ಯೋಚಿಸಿದರೆ ಯಾರೂ ಏನೂ ಮಾಡುವ ಹಾಗೆಯೇ ಇಲ್ಲ.- ಮನೆ ಆಗುವುದು

ಒಳ್ಳೆಯದೇ ಆಯಿತು. ಅನುವು– ಆಪತ್ತೆಂದರೆ ಕೂಗಿದರೂ ಹತ್ತಿರದಲ್ಲಿ ಯಾರಿರಲಿಲ್ಲ. ಇಷ್ಟಕ್ಕೂ ಮನೆ ತಾನೆ? ಫ್ಲಾಟ್ ಅಲ್ಲವಲ್ಲ, ಬಚಾವು.

ಕೆಲಸ ಸುರುವಾಯಿತು. ಅಳೆದರು, ಕೆತ್ತಿದರು, ಲಾರಿ ಬಂತು, ಕಲ್ಲು ಬಂತು, ಹೊಯಿಗೆ ಬಂತು, ಸಿಮೆಂಟು ಬಂತು, ಕೆಲಸ ಮುಂದರಿಯಿತು. ಮನೆ ಕಟ್ಟುವುದನ್ನು ನೋಡುತ್ತಿದ್ದರೆ ಹೊತ್ತು ಹೋದದ್ದೇ ತಿಳಿಯುವುದಿಲ್ಲ. ಕಲ್ಲುಗಳು ಜೊತೆಜೊತೆಯಾಗಿ ಮರೆಯಾಗಿ ಕುಳಿತು ಮನೆಯಾಗಿ ಬಿಡುವ ಚೋದ್ಯವದು. ಜಂಗಮದ ಬದುಕಿಗೆ ಸ್ಥಾವರದ ಚೌಕಟ್ಟು, ಹಾಗೆ ನೋಡಿದರೆ ಸ್ಥಾವರವು ಇಲ್ಲದೊಡೆ ಜಂಗಮಕ್ಕುಳಿವಿಲ್ಲವಯ್ಯಾ... ಹ್ಞಾಂ, ಮನೆ ಮುಂದರಿಯಿತು, ಮೇಲೇರಿತು, ಉಪ್ಪರಿಗೆಯೂ ಆಗಿ ಮುಗಿಯಿತು. ಅದರೆ ಅಯ್ಯೊ, ನೋಡುತ್ತ ನಿಂತಂತೆ ಅಲ್ಲಿದ್ದ ಅಷ್ಟು ಆಕಾಶ ಎಲ್ಲಿ ಮಾಯವಾಯ್ತು? ಗೊತ್ತೇ ಆಗದೆ ಕಣ್ಮರೆಯಾಗಿತ್ತು.

ಕಾಲ ಸಂದಂತೆ ಸುತ್ತಮುತ್ತ ಮನೆಗಳಾದವು, ಫ್ಲ್ಯಾಟ್‌ಗಳಾದವು, ಆಕಾಶವೂ ಅಷ್ಟಷ್ಟೇ ಮಾಯವಾಗುತ್ತ ಹೋಯಿತು. ಹೋಗಿಹೋಗಿ, ಸ್ವಲ್ಪವೇ ಸ್ವಲ್ಪ, ನಮ್ಮ ಪಕ್ಕದ ಸೈಟಿನ ಮೇಲಿನದೂ ಸೇರಿ, ಉಳಿದು ಕೊಂಡಿತ್ತು. ಇತ್ತೀಚೆಗೆ ಆ ಸೈಟೂ ಮಾರಾಟವಾದ ಸುದ್ದಿ. ಕೇಳಿ ಕರುಳು ಖಳಕ್ಕೆಂದಿತು. ನಾವು ಮನೆ ಕಟ್ಟಬೇಕು, ಉಳಿದವರು ಕೂಡದು ಎಂದಹಾಗೆ ಇದು, ಸರಿಯೆ?ಮನೆ ಕಟ್ಟುವ ತಯಾರಿಯಾಗಿ ಕಂಟ್ರಾಕ್ಟರು ಬಂದರು. ಕಟ್ಟಿಸುವವರು ಹಿಂದೆ ಮುಂದೆ ಕೈಕಟ್ಟಿಕೊಂಡು ಕನಸುಗಣ್ಣಿಂದ ದುಡ್ಡು ಹೊಂದಿಸುವ ಯೋಚನೆಗಣ್ಣಿಂದಲೂ, ಒಮ್ಮೊಮ್ಮೆ ತಾವೊಬ್ಬರೇ ಒಮ್ಮೊಮ್ಮೆ ಇಡೀ'ಫೆಮಿಲಿ'ಯೊಂದಿಗೆ ಬರುವರು. ಖುಶಿಗೊಳ್ಳುವರು. ಸ್ವಂತ ಮನೆಯೆಂಬುದು ಎಂತಹ ಸಂತೋಷದ ವಿಚಾರ. ಹೋಯ್, ಸ್ವಂತ ಮನೆಯಲ್ಲಿ ಒಂದು ಕಸ ಬಿದ್ದರೂ ಅದನ್ನು ಎತ್ತುವಾಗ ಕೊಂಡಾಟ ಬಂದೀತು, ಹೌದೆ– ಅಂತೆಲ್ಲ ಮೊನ್ನೆಯೊಂದು ದಿನ ನಮ್ಮ ಮನೆ ಜಗಲಿಯ ಮೇಲೆ ಕುಳಿತು ಉರಿಬಿಸಿಲಿಗೆ ನೀಡಿದ ತಂಪು ಬೆರಸಿನ ಮಜ್ಜಿಗೆಯನ್ನು ಕುಡಿಯುತ್ತ ನುಡಿದರು. ಹೌದೆನ್ನುತ್ತ ನಾನು, ಒಳ ಹೆದರಿಕೆಯನ್ನು ತೋರ್ಪಡಿಸದೆ, ಮೆಲ್ಲ ಎಷ್ಟು ದೊಡ್ಡ ಮನೆ, ಮಹಡಿ ಕಟ್ಟುತ್ತೀರ, ಇತ್ಯಾದಿ ಕೇಳಿದೆ.ಎಲ್ಲ ಹೇಳಿದರು. ಕೇಳಿ 'ಇನ್ನು ಸ್ವಲ್ಪವೇ ಸಮಯ. ಹಾಗಾದರೆ, ಅಷ್ಟು ಆಕಾಶವೂ ಮಾಯವಾಗುತ್ತದೆ' ಎಂದೆ ಸ್ವಗತದಂತೆ.

ನಾನೇನೋ ಕುಶಾಲು ಮಾತಾಡಿದೆ ಎಂಬಂತೆ ಅಥವಾ ಬರೆಯುವವರೆಲ್ಲ ಮಾತಾಡುವ ರೀತಿ ಹೀಗೆಂಬಂತೆ ನಕ್ಕರು. ಒಳಗಿನಿಂದ ನಾನು ಕಂಪಿಸಿದ್ದು ಅವರಿಗೆ ಹೇಗೆ ತಿಳಿಯಬೇಕು? ಅದು ಕುಶಾಲಲ್ಲ ಅಂತ ಹೇಳಲೂ ಆಗದೆ, ಸುಮ್ಮನಾದೆ.

ಇದ್ದ ಚೂರು ಆಕಾಶವೂ ಹೀಗೆ ಮಾಯವಾಯ್ತು. ಎಲ್ಲರೂ ಹೀಗೆ ಚೂರು ಚೋರೇ ಆಕಾಶ ಕಾಣೆ ಮಾಡಿದರೆ ಹೇಗೆ? ಆಕಾಶ ಎಲ್ಲಿ

ಹೋಗಬೇಕು?ಎಂದೆ.

–ಎಲ್ಲ ಭ್ರಮೆಯಲ್ಲವೇ? ಆಕಾಶವೆಲ್ಲಿ ಚೂರಾಗುತ್ತದೆ? ಅದು ಹೋಗುವುದಾದರೂ ಎಲ್ಲಿಗೆ? ಇದ್ದಲ್ಲೇ ಇರುತ್ತದೆ.

– ನೋಡು ಅಲ್ಲಿಂದ,ಇಲ್ಲಿಂದ, ಇಲ್ಲಿ ನಿಂತು, ಅಲ್ಲಿ ನಿಂತು ... ನೋಡಿದೆಯ, ಇದ್ದಲ್ಲೇ ಇದೆ?

–ವಾಸ್ತವವಾಗಿ ಆಕಾಶವನ್ನು ಎಲ್ಲಿಂದ ನೋಡಿದರೂ ಚೂರೇ.ಬಯಲಲ್ಲಿ ನೋಡು, ಸಮುದ್ರತಟದಲ್ಲಿ ನೋಡು, ಎಲ್ಲೇ ನೋಡು, ದೊಡ್ಡಚೂರು, ಸಣ್ಣಚೂರು, ವ್ಯತ್ಯಾಸ ಅಷ್ಟೆ.

–ಆಕಾಶ ಕಾಣೆಮಾಡಲು ನಾವು ಯಾರು? ಅದು ಆದಿ, ಅನಂತ.

–ಕಡೆಗೂ, ಅವಕಾಶ ಎಂಬುದೇ ಆಕಾಶ, ಕೇಳಿಲ್ಲವೇ?

ಅಲ್ಲ, ನಾ ಹೇಳಿದ್ದು ಹಾಗಲ್ಲ ಅಂತ ವಿವರಿಸಲೂ ಆಗಲಿಲ್ಲ ನನಗೆ.

ದಿನ ಹೋದಂತೆ ಸುತ್ತಮುತ್ತಿನ ಆಕಾಶವೆಲ್ಲ ಚೂರುಚೂರೇ ಮಾಯವಾಗುತ್ತ ಎಡೆ ಎಡೆಯಲ್ಲಿನ ಆಕಾಶ ಚೂರುಗಳಷ್ಟೆ ನಮ್ಮ ಪಾಲಿಗೆ ಉಳಿದವು. ಇಷ್ಟಾದರೂ ಇದೆಯಲ್ಲ, ಇಷ್ಟೂ ಇಲ್ಲದೆ ಹೋಗಿದ್ದರೆ, ಎಂಬ ತತ್ತ್ವಕ್ಕೆ ಮೊರೆಹೋಗದೆ ವಿಧಿಯಿಲ್ಲವಷ್ಟೆ? ಆಶ್ಚರ್ಯವೆಂದರೆ, ಆ ಚೂರು ಆಕಾಶದ ಆ ಪುಟ್ಟ ದೇಶದಲ್ಲಿ ಅವರವರ ಕಾರ್ಯನಿಮಿತ್ತ ನಿಶ್ಶಬ್ದ ನಿಶ್ಚಿಂತ ಸಾಗಿಹೋಗುವ ಸೂರ್ಯಚಂದ್ರರಾಗಲೀ ನಕ್ಷತ್ರಗಳಾಗಲೀ, ಹಕ್ಕಿಪಕ್ಕಿಗಳಾಗಲೀ ಇಡಿ ಇಡಿಯಾಗಿಯೇ ಕಾಣುತ್ತಿದ್ದವು. ಆದರೆ ಅದು ಅಷ್ಟು ದೇಶ ದಾಟಲು ಅವಕ್ಕೆ ಬೇಕಾದ ಕಾಲಪ್ರಮಾಣದಲ್ಲಿ ಮಾತ್ರ... ಮತ್ತೆ ಮರೆಯಾಯಿತು.ಆ ಮೇಲಿನದೆಲ್ಲ ಅನುಭವಕ್ಕೆ, ಊಹೆಗೆ. ಸ್ಮೃತಿಗೆ.

ಒಮ್ಮೊಮ್ಮೆ ಸುಮ್ಮನೆ ಕುಳಿತಿರುವ ಸಂಜೆಗಳಲ್ಲಿ ಈ ಚೂರು ಆಕಾಶಗಳೆಲ್ಲ ಮತ್ತೆ ಒಟ್ಟಾಗಿ ಮುಂಚಿನಂತೆಯೇ ತಲೆ ಮೇಲೆ ಹರಡುವಂತಾದರೆ ಅಂತೊಂದು ಬಗೆಗೆ ಒಳಗಾಗುತ್ತೇನೆ. ಅಂತಹ ಒಂದು ದಿನ ಇದ್ದಕ್ಕಿದ್ದಂತೆ ಛಕ್ಕನೆ ಅನಿಸಿತು, ನಮ್ಮ ಮನೆ ಕಟ್ಟಿದಾಗಲೂ ಅಷ್ಟು ಆಕಾಶ ಮಾಯವಾಗಿತ್ತೆ? ಧಗ್ಗನೆದ್ದು ಕುಳಿತುಕೊಂಡೆ. ಅಯ್ಯೊ, ನನಗದು ಅಂದು ತಿಳಿಯಲೇ ಇಲ್ಲವಲ್ಲ. ಸ್ವಂತ ಮನೆಯ ಸಂತೋಷದಲ್ಲಿ ಬೀಗಿದ್ದೆ. ಅಲ್ಲೊಂದು ಆಕಾಶವಿತ್ತು ಎಂಬುದೇ ನನ್ನ ಮನಸ್ಸಿಗೆ ಬಂದಿರಲಿಲ್ಲ. ಮಾಯವಾದ ಆ ಆಕಾಶವಾದರೂ ಎಲ್ಲಿ ಹೋಯಿತು? ಒಳಗಂತು ಇಲ್ಲ.

ಹುಡುಕುತ್ತಾ, ಕಟ್ಟಿದ ಮನೆ ಕೆಡವುವ ಹಾಗಿಲ್ಲ; ಆಕಾಶ ತಲೆಯ ಮೇಲೆ ಬಿದ್ದರೂ ಸರಿಯೆ. ಏನಿದು ಏನಾಗಿ ಹೋಯಿತು!

*(ಸಾಭಾರ – ನೀನಾಸಂ ಮಾತುಕತೆ ೭೩)*

# ಅಮೆರಿಕಾದ ವಿದೇಶಾಂಗ ನಡಾವಳಿ

*-ಎಸ್.ಆರ್.ರಾಮಸ್ವಾಮಿ*

(ಪ್ರಧಾನಿ ಡಾ॥ ಮನಮೋಹನ್ ಸಿಂಗ್ ಈಗ ತಾನೆ ಅಮೆರಿಕಾಕ್ಕೆ ಹೋಗಿ ಬಂದು ಅಮೆರಿಕಾದೊಡನೆ ಮಾಡಿಕೊಂಡಿರುವ ಒಪ್ಪಂದಗಳ ಬೆಳಕಿನಲ್ಲಿ ಈ ಲೇಖನ ವಿಶೇಷ ಮಹತ್ವ ಪಡೆಯುತ್ತದೆ –ಸಂ.)

**ಜಾ**ರ್ಜ್‌ಬುಶ್(II) ನೇತೃತ್ವದ ಅಮೆರಿಕ ಸರ್ಕಾರವು ಮೀನಮೇಷ ಎಣಿಸಿ ಕಡೆಗೂ ಇದೀಗ ಪರ್ವೇಜ್ ಮುಷರ್ರಫ್ ಶಾಸಿತ ಪಾಕಿಸ್ತಾನಕ್ಕೆ ಎಫ್–೧೬ ಜೆಟ್ ಯುದ್ಧವಿಮಾನಗಳನ್ನು ಸರಬರಾಜು ಮಾಡಲು ಮುಂದಾಗಿರುವುದರ ಹಿನ್ನೆಲೆಯಲ್ಲಿ ಅಮೆರಿಕಾದ ವಿದೇಶಾಂಗ ನಡಾವಳಿಯ ರೂಪುರೇಖೆಗಳನ್ನು ಮತ್ತೊಮ್ಮೆ ಮೆಲುಕು ಹಾಕುವುದು ಸಂಗತವಾಗಿದೆ.

ಜಗತ್ತಿನ ರಾಷ್ಟ್ರಗಳು ಬರ್ಬರತೆಯಿಂದ ಆರಂಭವಾಗಿ ನಾಗರಿಕತೆಯತ್ತ ವಿಕಾಸಗೊಂಡು ಅನಂತರ ಅವನತಿಯಲ್ಲಿ ಪರ್ಯವಸಾನಗೊಳ್ಳುತ್ತವೆ ಎಂಬುದು ಇತಿಹಾಸ. ಆದರೆ ನಾಗರಿಕತೆಗೆ ಏರದೆಯೇ ಬರ್ಬರತೆಯಿಂದ ನೇರವಾಗಿ ನೈತಿಕ ಅಧಃಪಾತದತ್ತಲೇ ಧಾವಿಸಿರುವ ಒಂದು ರಾಷ್ಟ್ರ ಅಮೆರಿಕ–ಎಂದು ವ್ಯಂಗ್ಯವಾಗಿ ಹೇಳಿದ್ದ ಆಸ್ಕರ್ ವೈಲ್ಡ್("America is the only country that went from barbarism to decadence without civilization in between") ಈ ವ್ಯಾಖ್ಯೆಯ ತಥ್ಯತೆಯನ್ನು ಕಳೆದ ಹಲವು ವರ್ಷಗಳ ಘಟನೆಗಳು ಇನ್ನಿಷ್ಟು ಸ್ಥಿರೀಕರಿಸಿವೆ. ೨೦೦೩ರ ಅಂತ್ಯದಲ್ಲಿ sorit ಬರೆದ ವ್ಯಂಗ್ಯಚಿತ್ರವೊಂದು ಅಮೆರಿಕದ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದರಲ್ಲಿ ಜಾರ್ಜ್‌ಬುಶ್‌ನಿಗೂ ಸದ್ದಾಂ ಹುಸೇನನಿಗೂ ನಡುವೆ ನಡೆದ ಕಾಲ್ಪನಿಕ ಸಂಭಾಷಣೆ ಹೀಗಿತ್ತು;

ಬುಶ್ : "ಅಯ್ಯಾ ಸದ್ದಾಂ, ನಾವು ನಿನ್ನೊಡನೆ ಹೇಗೆ ವರ್ತಿಸಬೇಕು?"

ಸದ್ದಾಂ: "ಬಹಳ ಸುಲಭ. ಜಾಗತಿಕ ಸರ್ವಾಧಿಕಾರಿಯೊಬ್ಬನು ಪ್ರಾದೇಶಿಕ ಸರ್ವಾಧಿಕಾರಿಯೊಬ್ಬನಲ್ಲಿ ಹೇಗೆ ವರ್ತಿಸಬಹುದೋ ಹಾಗೆ ಮಾಡಿ, ಅಷ್ಟೆ."

ಅಮೆರಿಕ ದೂರದರ್ಶನ ಚ್ಯಾನೆಲುಗಳಲ್ಲಿ ಪ್ರತಿ ರಾತ್ರಿ ಲಕ್ಷಾಂತರ ಪ್ರೇಕ್ಷಕರಿಗೆ ಕಚಗುಳಿಯಿಟ್ಟು ನಗಿಸುವ ಲಾಟರ್‌ಮನ್ ಕಳೆದ ಏಪ್ರಿಲ್ ತಿಂಗಳ ಒಂದು ಪ್ರಸಾರದಲ್ಲಿ ಹೇಳಿದ: "ಇತ್ತೀಚೆಗೆ ಜಾರ್ಜ್ ಬುಶ್‌ನ ಜನಪ್ರಿಯತೆ ಎಷ್ಟು ಕುಸಿದಿದೆಯೆಂದರೆ ಅದನ್ನು ಮತ್ತೆ ಗಳಿಸಲು ಅವನು ಸದ್ದಾಂನನ್ನು ಬಿಡುಗಡೆ ಮಾಡಿ ಮತ್ತೆ ಬಂಧಿಸಬೇಕೆಂದು ಯೋಚಿಸುತ್ತಿದ್ದಾನೆ."

ಅಮೆರಿಕ ತನ್ನದೇ ತೀಟೆಗಾಗಿ ಅಫಘಾನಿಸ್ತಾನದ ಮೇಲೆ ಯುದ್ಧಕ್ಕಿಳಿಯಿತು; ಆನಂತರ ಇರಾಕಿನ ಮೇಲೆರಗಿತು. ಈ ಎರಡು ಯುದ್ಧಗಳೂ ಭಿನ್ನಸ್ವರೂಪದವು; ಎರಡಕ್ಕೂ ಸಮಾನವಾಗಿರುವ ಅಂಶ ಅಮೆರಿಕ ಸರ್ಕಾರ ಮಾತ್ರ. ಅಮೆರಿಕದ ಬುಶ್ ಸರ್ಕಾರವೇನೊ "ಇವೆರಡೂ ಭಯೋತ್ಪಾದನೆಯ ವಿರುದ್ಧದ ಜಾಗತಿಕ

ಯುದ್ಧದ ಎರಡು ಭಾಗಗಳು" ಎಂಬ ಅನುಕೂಲಸಿಂಧು ವಾದವನ್ನು ಮುಂದೊಡ್ಡಿದೆ. ಆದರೆ ಇದು ಸುತರಾಂ ಸತ್ಯದೂರವಾದದ್ದು. ಅಮೆರಿಕದ ಮೇಲೆ ನಡೆದ ಅಲ್-ಖೈದಾ ದಾಳಿಯ ಹಿನ್ನೆಲೆಯಲ್ಲಿ ಅಫಘಾನಿಸ್ತಾನದ ಮೇಲೆ ಅಮೆರಿಕ ನಡೆಸಿದ ಸಮರದ ಬಗ್ಗೆ ಸ್ವಲ್ಪಮಟ್ಟಿಗಾದರೂ ಅಂತರರಾಷ್ಟ್ರ ಸಮುದಾಯದ ಸಮ್ಮತಿ ಇದ್ದಿತು. ಮತ್ತು ಅಫಘಾನಿಸ್ತಾನದೊಳಗೂ ತಾಲಿಬನ್ ಬಣಗಳನ್ನು ಹೊರತುಪಡಿಸಿ ಉಳಿದ ಜನತೆಯು ಅಲ್ಲಿ ನಡೆದಿದ್ದ ಅಲ್-ಖೈದಾ ನಿಯಂತ್ರಿತ ಪ್ರಭುತ್ವದ ಪರಾಭವವನ್ನು ಸ್ವಾಗತಿಸಿತ್ತು. ಆದರೆ ಇರಾಕಿನ ಮೇಲೆ ಅಮೆರಿಕ ಯುದ್ಧ ಸಾರಿದುದನ್ನು ರಷ್ಯ-ಫ್ರಾನ್ಸ್-ಜರ್ಮನಿ ಸೇರಿದಂತೆ ವಿಶ್ವಸಂಸ್ಥೆಯ ಬಹುತೇಕ ರಾಷ್ಟ್ರಗಳು ತೀಕ್ಷ್ಣವಾಗಿ ವಿರೋಧಿಸಿದವು; ಮತ್ತು ಸ್ವತಃ ಇರಾಕಿನ ಜನತೆಯೂ ಅದನ್ನು ವಿರೋಧಿಸಿತ್ತು. ಅಮೆರಿಕದ ಈ ಎರಡು ಯುದ್ಧಗಳ ನಡುವೆ ಈ ಮೂಲಭೂತ ವ್ಯತ್ಯಾಸವನ್ನು ಮರೆಯಬಾರದು.

ಅಲ್-ಖೈದಾ ತಾಲಿಬಾನ್ ವಲಯಗಳ ಭಯೋತ್ಪಾದಕ ಚಟುವಟಿಕೆಗಳು ಇಡೀ ಮಾನವತೆಗೇ ಮಾರಕವೆಂದು ಜಗತ್ತೆಲ್ಲ ಸಾರಿ ಸಾರಿ ಹೇಳುತ್ತಿದ್ದರೂ ಅದನ್ನು ಅಮೆರಿಕ ಕಿವಿಗೊಟ್ಟು ಕೇಳಿಸಿಕೊಂಡಿರಲೇ ಇಲ್ಲ. ಕಡೆಗೆ ಅದರ ಬುಡಕ್ಕೇ ಪೆಟ್ಟು ತಾಗಿದ ಮೇಲೆ ಅದು ಏಕಾಏಕಿ ಎಚ್ಚೆತ್ತಿತ್ತು. ಕ್ಲಿಂಟನ್ ಸರ್ಕಾರವೂ ಬುಶ್ ಸರ್ಕಾರವೂ ಅದುವರೆಗೆ ಪಾಕಿಸ್ತಾನ ಹೇಳಿದುದಕ್ಕೇ ಗೋಣು ಹಾಕುತ್ತ ಬಂದಿದ್ದವು. ಅಫಘನ್ ಯುದ್ಧದ ನಂತರವೂ ಮುಷರ್ರಫ್ ಅಮೆರಿಕದ ದಾರಿ ತಪ್ಪಿಸುತ್ತಲೇ ಹೋದದ್ದು ಇತಿಹಾಸ.

ಅಮೆರಿಕದ ಯುದ್ಧಗಳ ಸಾಂದರ್ಭಿಕತೆಯುನ್ನು ಮನದಟ್ಟು ಮಾಡಿಕೊಳ್ಳಬೇಕು. ಆಫಘಾನಿಸ್ತಾನದ ಪರಿಸ್ಥಿತಿ ಅಮೆರಿಕದ ದಾಳಿಗೆ ಮುಂಚೆಯೆ ಹತ್ತಿರ ಹತ್ತಿರ ಚರಮಸೀಮೆ ತಲುಪಿತ್ತು; ತಾಲಿಬಾನ್ ಮುಷ್ಠಿಯಿಂದ ಯಾವಾಗ ಬಿಡುಗಡೆ ಹೊಂದಿಯೇವೊ ಎಂದು ಅಲ್ಲಿಯ ಜನತೆ ಕಾದಿದ್ದರು. ಹೀಗಿದ್ದುದರಿಂದ ಅಮೆರಿಕ ಸೇನೆಯ ಮಧ್ಯಪ್ರವೇಶ ಅವರಿಗೆ ಅಷ್ಟೇನು ಅಹಿತವೆನಿಸಲಿಲ್ಲ. ಆದರೆ ಇರಾಕಿನ ಸ್ಥಿತಿ ಹೀಗಿರಲಿಲ್ಲ. ಅಲ್ಲಿ ಅಲ್ಪ ಸ್ವಲ್ಪ ಅಸಮಾಧಾನವಿದ್ದುದು ಸದ್ದಾಂ ಹುಸೇನ್ ಮತ್ತು ಪರಿವಾರದ ಲೂಟಿ-ಕೊಳ್ಳೆಗಳ ಬಗ್ಗೆ. ಇದು ಬಹಳವೆಂದರೆ ಸ್ಥಳೀಯ ಸಮಸ್ಯೆ. ಆದರೆ ಜಾರ್ಜ್‌ಬುಶ್-ಟೋನಿಬ್ಲೇರ್ ಕೂಟವು ಇರಾಕಿನಲ್ಲಿ ಸಮೂಹನಾಶಕಾಸ್ತ್ರ ಶೇಖರಣೆ ಇದೆಯೆಂಬ ಕಥೆ ಕಟ್ಟಿ ಈ ಕಾರಣದಿಂದ ಇರಾಕ್ ಅಮೆರಿಕಾಕ್ಕೂ ಅದರ ಓರಗೆಯವರೆಗೂ ಅಪಾಯಕಾರಿಯಾಗಿದೆ ಎಂದು ನೆಪ ಹೂಡಿ ಯುದ್ಧವನ್ನು ಉಪಕ್ರಮಿಸಿತು. ವಿಶ್ವಪ್ರಯತ್ನ ಮಾಡಿದರೂ ಅಮೆರಿಕ ಪಡೆಗಳಿಗೆ ಇರಾಕಿನಲ್ಲಿ ಯಾವುದೇ ಅಸ್ತ್ರಸಂಗ್ರಹವನ್ನಾಗಲಿ ಭಯೋತ್ಪಾದನೆಯ ತರಬೇತಿ ಕೇಂದ್ರದ ಅವಶೇಷವನ್ನಾಗಲಿ ಬೊಟ್ಟುಮಾಡಿ ತೋರಿಸಲಾಗಲಿಲ್ಲ.

ಸದ್ದಾಂ ಬಗ್ಗೆ ಸ್ಥಳೀಯ ವಿರೋಧವಿದ್ದ ಕಾರಣ ಅಲ್ಲಿಯವರು ಹೊರಗಿನವರ ಪ್ರವೇಶವನ್ನು ಸ್ವಾಗತಿಸಿಬಿಡುತ್ತಾರೆ ಎಂಬ ಅಮೆರಿಕದ ನಿರೀಕ್ಷೆಯನ್ನು

ಅಮಾಯಕತೆ ಎಂದೆ ಭಾವಿಸಬೇಕಾಗುತ್ತದೆ. ಪ್ರತಿಯಾಗಿ, ಯುದ್ಧದಿಂದಾಗಿ ಇರಾಕಿನ ಜನರ ಸ್ವರಾಷ್ಟ್ರಾಭಿಮಾನ ಇನ್ನಷ್ಟು ಗರಿಗೆದರಿತು. ಎರಡುವರ್ಷ ಕಳೆದ ಮೇಲೂ ಪಪೆಟ್ ಸರ್ಕಾರ ರಚನೆಯಾದ ನಂತರವೂ ಈಗಲೂ ದಿನನಿತ್ಯ ಅಮೆರಿಕದ ಪಡೆಗಳವರೂ ಸ್ಥಳೀಯರೊಡನೆ ಸೆಣಸಾಡುತ್ತಲೇ ಇದ್ದಾರೆ.

ಇಷ್ಟಾಗಿ ಅಮೆರಿಕ ಬಯಸುವುದಾದರೂ ಏನನ್ನು? ಇದಕ್ಕೆ ಉತ್ತರಿಸುವುದು ಕಷ್ಟವಲ್ಲ. ಏಕೆಂದರೆ ಅಮೆರಿಕದ ಕಳೆದ ಐವತ್ತುವರ್ಷಗಳ ಇತಿಹಾಸ ಅದರ ರಕ್ತಗತ–ರಕ್ತಸಿಕ್ತ ಧೋರಣೆಯನ್ನು ಅಸಂದಿಗ್ಧವಾಗಿ ಸ್ಫುಟಪಡಿಸಿದೆ. ತನ್ನ ಗಡಿಗಳಾಚೆ ಜಗತ್ತಿನೆಲ್ಲೆಡೆ ಪ್ರಜಾಪ್ರಭುತ್ವವಿದ್ದಲ್ಲಿ ಅದಕ್ಕೆ ಬದಲಾಗಿ ಸರ್ವಾಧಿಕಾರವನ್ನು ಅದು ಬಯಸುತ್ತದೆ, ಮತ್ತು ಈಗಾಗಲೇ ಸರ್ವಾಧಿಕಾರಿ ಇರುವೆಡೆ ಅವನು ತನ್ನ ಆದೇಶಾನುವರ್ತಿಯಾಗಿ ಇರಬೇಕೆಂದು ಬಯಸುತ್ತದೆ; ಈಗ ಇರುವ ಸರ್ವಾಧಿಕಾರಿ ತನಗೆ ಅನುಕೂಲಕರನಲ್ಲದಿದ್ದಲ್ಲಿ ಅವನನ್ನು ಸ್ಥಾನಚ್ಯುತಗೊಳಿಸಿ ಅಲ್ಲಿ ತನ್ನ ಹಿತಕ್ಕೆ ಹೊಂದಿಕೆಯಾಗುವಂಥ ವ್ಯವಸ್ಥೆಯನ್ನು ನೆಲೆಗೊಳಿಸುತ್ತದೆ. ದಶಕಗಳುದ್ದಕ್ಕೂ ಎಲ್ಲೆಡೆ ಅಮೆರಿಕ ಹೀಗೆಯೇ ಮಾಡುತ್ತಾಬಂದಿರುವುದರಿಂದ ಅದರ ಯಾವುದೆ ಧೋರಣೆಯನ್ನು ಪ್ರಜಾಪ್ರಭುತ್ವತತ್ವದ ಅಥವಾ ಭಯೋತ್ಪಾದಕತೆಯ ಭೂಮಿಕೆಯಲ್ಲಿ ವಿಶ್ಲೇಷಿಸಹೊರಡುವುದು ಅರ್ಥಹೀನ. ತನಗೆ ತೋರಿದಂತೆ ನಡೆದು "ನಿಮಗೆ ತಾಖತ್ತಿದ್ದರೆ ವಿರೋಧಿಸಿ" ಎನ್ನುವುದೇ ಅಮೆರಿಕದ ಸ್ವಭಾವ. ಅದರ ವರ್ತನೆಯಲ್ಲಿ ನೈತಿಕತೆಯನ್ನಾಗಲಿ ತಾರ್ಕಿಕತೆಯನ್ನಾಗಲಿ ಅರಸುವುದು ಪರುಷದಲ್ಲಿ ಕಲ್ಲನ್ನು ಹೆಕ್ಕಿತೆಗೆದಂತೆಯೇ.

ಪ್ರತಿ ಭಾನುವಾರ ಸಂಜೆ ಬಿ.ಬಿ.ಸಿ.ಯಲ್ಲಿ 'ಡೇಟ್‌ಲೈನ್ ಲಂಡನ್' ಎಂಬ ವಿವಿಧ ತಜ್ಞರ ಸಂವಾದ ನಡೆಯುತ್ತದೆ. ೨೦೦೨ ಜುಲೈ ೨೧ರ ಅಂಕಣದಲ್ಲಿ ಇರಾಕ್ ಯುದ್ಧಸಂಭವದ ಪ್ರಸ್ತಾವ ಬಂದಿತು. ಜಾರ್ಜ್‌ಬುಷ್‌ನನ್ನು ಹೆಂಡಕುಡಿದ ವಾಹನ ಚಾಲಕನಿಗೆ ಹೋಲಿಸಿದ ಒಬ್ಬ ಮಹಿಳೆ ಕೇಳಿದಳು: "ಇಷ್ಟಕ್ಕೂ ಇರಾಕ್ ಮೇಲೆ ಯಾಕೆ ಯುದ್ಧಮಾಡಬೇಕಾಗಿದೆ? (ಇಸ್ರೇಲಿನ) ಏರಿಯಲ್‌ಷರೂನ್ ಮಾಡದಿರುವಂಥದೆನನ್ನು ಸದ್ದಾಂ ಮಾಡಿದ್ದಾನೆ?" ಇದಕ್ಕೆ ಬಂದ ಉತ್ತರ: "ನಮ್ಮ ನಾಗರಿಕತೆ ಉಳಿಯಬೇಕಾದರೆ ಸದ್ದಾಂನನ್ನು ತೆಗೆಯಲೇಬೇಕು. ಏಕೆಂದರೆ ಸದ್ದಾಂ ದುಷ್ಟ; ಷರೂನ್ ಸಜ್ಜನ... ಇಷ್ಟಕ್ಕೂ ರಾಜಕೀಯದಲ್ಲಿ ನೈತಿಕ ಪರಿಗಣನೆಗಳಿಗೆ ಎಲ್ಲಿ ಸ್ಥಾನವಿದೆ!"

ತಾನು ಪ್ರಜಾಪ್ರಭುತ್ವನಿಷ್ಠವೆಂದು ತನ್ನ ಉದಯದ ಕಾಲದಿಂದಲೇ ಅಮೆರಿಕ ಘೋಷಿಸುತ್ತಾ ಬಂದಿದೆ. ಆದರೆ ಕಳೆದ ೬೦ ವರ್ಷಗಳುದ್ದಕ್ಕೂ ಜಗತ್ತಿನೆಲ್ಲೆಡೆ ಪ್ರಜಾಪ್ರಭುತ್ವವನ್ನು ಶಿಥಿಲಗೊಳಿಸುವ ಧೋರಣೆಯನ್ನು ಅದು ನಿರ್ಭಿಡೆಯಾಗಿ ಅನುಸರಿಸಿದೆ.

ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರನ ತಾನಾಶಾಹಿಯೂ ನರಮೇಧವೂ ನಡೆದಿದ್ದಾಗಲೂ ಅಮೆರಿಕದ ಅಧ್ಯಕ್ಷ ಫ್ರಾಂಕ್ಲಿನ್ ಡೆಲಾನೊ ರೂಸ್‌ವೆಲ್ಟನ

ಆಶೀರ್ವಾದದಿಂದ ಜನರಲ್ ಮೋಟಾರ್ಸ್, ಡ್ಯೂಪಾಂಟ್, ಚೇಸ್ ನ್ಯಾಷನಲ್ ಬ್ಯಾಂಕ್, ನ್ಯೂಜೆರ್ಸಿಯ ಸ್ಟ್ಯಾಂಡರ್ಡ್ ಆಯಿಲ್ ಮೊದಲಾದ ಅಮೆರಿಕದ ಕಂಪನಿಗಳು ಹಿಟ್ಲರನ ಸರ್ಕಾರದೊಡನೆ ತಮ್ಮ ವಾಣಿಜ್ಯ ವಹಿವಾಟನ್ನು ಕುದುರಿಸಿಕೊಂಡವು. ಪೋರ್ಡ್ ಮೋಟಾರ್ ಕಂಪನಿಯ ಹೆನ್ರಿ ಪೋರ್ಡ್ ಹಿಟ್ಲರನ ಮೈತ್ರಿಗಳಿಸಿಕೊಂಡದ್ದು ಮಾತ್ರವಲ್ಲದೆ ಹಿಟ್ಲರಿನಿಂದ ಆಗಿನ ಜರ್ಮನ್ ಪ್ರಭುತ್ವದ ಅತ್ಯುಚ್ಚ ನಾಗರಿಕ ಸನ್ಮಾನಕ್ಕೆ ಪಾತ್ರನಾದ. ಹೆನ್ರಿ ಪೋರ್ಡ್‌ನ ಭಾವಚಿತ್ರವೊಂದು ಹಿಟ್ಲರನ ದಿವಾನಖಾನೆಯ ಗೋಡೆಯ ಮೇಲೆ ವಿರಾಜಮಾನವಾಗಿತ್ತು. ಹಿಟ್ಲರನ ಯುದ್ಧೋದ್ಯಮಕ್ಕೆ ದೂರವಾಣಿ, ರೇಡಿಯೊ ಸಂಪರ್ಕ ಸಾಧನಗಳನ್ನೂ ಜರ್ಮನ್ ಬಾಂಬುಗಳ ಹಲವು ಮುಖ್ಯ ಘಟಕಗಳನ್ನೂ ಒದಗಿಸಿದುದು ಅಮೆರಿಕದ ಐಟಿಟಿ ಕಂಪನಿ.

ಎರಡನೆ ಮಹಾಯುದ್ಧ ಮುಗಿದ ಮೇಲೆ ಇಂಗ್ಲೆಂಡ್ ಮೊದಲಾದ ದೇಶಗಳು ಇರಾನಿನ ಇಂಧನತೈಲರಾಶಿಯನ್ನು ಕೊಳ್ಳೆಹೊಡೆಯುತ್ತಿದ್ದವು. ಇದನ್ನು ನಿಯಂತ್ರಿಸಲು ಯತ್ನಿಸುತ್ತಿದ್ದ ಇರಾನಿನ ಪ್ರಧಾನಮಂತ್ರಿ ಮೊಹಮ್ಮದ್ ಮೊಸಾದಕನ ವಿರುದ್ಧ ಅಮೆರಿಕ-ಇಂಗ್ಲೆಂಡ್‌ಗಳು ಕೂಟ ಕಟ್ಟಿ ಬಂಡಾಯವೆಬ್ಬಿಸಿ ಅವನನ್ನು ಪದಚ್ಯುತಗೊಳಿಸಿ ಮೊಹಮ್ಮದ್ ರೇಜಾಪಹ್ಲವಿಗೆ ಪಟ್ಟಾಭಿಷೇಕ ಮಾಡಿದವು. ಆಗ (೧೯೫೩) ಅಮೆರಿಕದ ಸೆಂಟ್ರಲ್ ಇಂಟೆಲಿಜನ್ಸ್ ಏಜೆನ್ಸಿಯ (ಸಿ.ಐ.ಎ.) ನಿರ್ದೇಶಕನಾಗಿದ್ದ ಆ್ಯಲನ್ ಡೆಲ್ಲೆಸ್ ಈ ಕಾರ್ಯಾಚರಣೆಗಾಗಿ ಹತ್ತು ಲಕ್ಷ ಡಾಲರನ್ನು ರವಾನಿಸಿದ. ರೇಜಾಪಹ್ಲವಿಗಾಗಿಯೇ SAVAK ಎಂಬ ಖಾಸಗಿ ರಕ್ಷಣಾದಳವೊಂದನ್ನು ಸಿ.ಐ.ಎ. ಏರ್ಪಡಿಸಿತು. ಈ ಸವಾಕ್ ವರ್ಷಗಳುದ್ದಕ್ಕೂ ನಡೆಸಿದ ನರಮೇಧವನ್ನೂ ಹೊಸ ಹೊಸದಾಗಿ ಯೋಜಿಸಿದ ಹಿಂಸಾಚರಣೆಯ ವಿಧಾನಗಳನ್ನೂ ಈ ಭೂಗ್ರಹದ ಇತಿಹಾಸದಲ್ಲಿಯೇ ಕಂಡು ಕೇಳರಿಯದಂಥವು- ಎಂದು ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್ ತನ್ನ ೧೯೭೬ರ ವರದಿಯಲ್ಲಿ ಹೇಳಿತ್ತು.

ದಕ್ಷಿಣ ವಿಯೆಟ್ನಾಮಿನಲ್ಲಿ CANLAO ಪಾರ್ಟಿಯ ಪ್ರಮುಖ ಡಿನ್-ಡಿಯೆಮ್(Ngo Dinh Diem)ನೂರಾರು ಜನ ಬೌದ್ಧ ಪ್ರಜೆಗಳ ಆಹುತಿ ತೆಗೆದುಕೊಂಡದ್ದು ಅಮೆರಿಕದ ಬೆಂಬಲದಿಂದಲೇ, ಸ್ವಾರಸ್ಯವೆಂದರೆ ಅವನ ಅತ್ಯಾಚಾರದ ಕುಂಭ ತುಂಬಿದಾಗ ಅವನನ್ನು ಎತ್ತಂಗಡಿ ಮಾಡಿ ಅಲ್ಲಿ ಬೇರೊಂದು ಸೇನಾಧಿಕಾರವನ್ನು ಜಾರಿಗೆ ತಂದದ್ದೂ ಅದೇ ಅಮೆರಿಕ.

೧೯೬೦ರ ದಶಕದಲ್ಲಿ ಇಂಡೋನೇಶಿಯದಲ್ಲಿ ಕಮ್ಯೂನಿಸ್ಟರು, ಸುಕರ್ಣೊ ಪರವಾದವರು, ಚೀಣಾದ ಪರವಾದವರು ಎಂದೆಲ್ಲ ಆರೋಪಿಸಿ ಮೊಹಮದ್ ಸುಹಾರ್ತೊ ಇಪ್ಪತ್ತುಲಕ್ಷಕ್ಕೂ ಹೆಚ್ಚು ಜನರನ್ನು ಮುಗಿಸಿಹಾಕಲು ನೆರವಾದದ್ದುಸಿ.ಐ.ಎ.

೧೯೭೦ರ ದಶಕದ ಪೂರ್ವಾರ್ಧದಲ್ಲಿ ಪೂರ್ವ ಆಫ್ರಿಕಾದ ಉಗಾಂಡದಲ್ಲಿ ಪ್ರಧಾನಿ ಮಿಲ್ಟನ್ ಒಬೋಟೆಯ ರಾಷ್ಟ್ರೀಕರಣ ಪ್ರಯಾಸಕ್ಕೆ ತಡೆಯೊಡ್ಡಲು ಅವನ

ವಿರುದ್ಧ ನರರಾಕ್ಷಸ ಇದೀ ಅಮೀನನನ್ನು ಪದಾಧಿಷ್ಠಿತಗೊಳಿಸಿದವು ಅಮೆರಿಕ-ಇಂಗ್ಲೆಂಡ್‌ಗಳು. ಇದೀ ಅಮೀನನ ರಕ್ಷಕದಳಕ್ಕೆ ತರಬೇತಿ ನೀಡಿದವು ಸಿ.ಐ.ಎ. ಪಡೆಗಳು. ತನ್ನ ವಿರೋಧಿಗಳೆನಿಸಿದ ಒಂದು ಲಕ್ಷಕ್ಕೂ ಹೆಚ್ಚು ಮಂದಿಯನ್ನು ಇದೀ ಅಮೀನ್ ಕೊಂದು ಮುಗಿಸಿದ.

ಮಧ್ಯ ಅಮೆರಿಕದ ಗ್ವಾಟೆಮಾಲಾದಲ್ಲಿ ವಾಣಿಜ್ಯದ ಏಕಸ್ವಾಮ್ಯ ಸ್ಥಾಪಿಸಿದ್ದದಲ್ಲದೆ ರಾಜಕಾರಣವನ್ನೂ ಸಾರ್ವತ್ರಿಕ ಜೀವನವನ್ನೂ ನಿಯಂತ್ರಿಸಿ ದಬ್ಬಾಳಿಕೆ ನಡೆಸಿದ್ದ ಅಮೆರಿಕ ಮೂಲದ ಯುನೈಟೆಡ್ ಫ್ರೂಟ್ ಕಂಪನಿಯನ್ನು ರಾಷ್ಟ್ರಾಧ್ಯಕ್ಷ ಅರ್ಬೆಂಜ್ ಗುಜ್ಮನ್ ರಾಷ್ಟ್ರೀಕರಿಸಲು ಯತ್ನಿಸಿದಾಗ ಸಿ.ಐ.ಎ. ಅಲ್ಲಿ ಅಂತರ್ಯುದ್ಧವನ್ನು ಸೃಷ್ಟಿಸಿ ಗುಜ್ಮನ್ ಸರ್ಕಾರವನ್ನು ಪದಚ್ಯುತಗೊಳಿಸಿ ತನ್ನ ಅನುವರ್ತಿ ಕಾರ್ಲೋಸ್ ಅರ್ಮಾಸನನ್ನು ಪ್ರತಿಷ್ಠಾಪಿಸಿತು. ಸಿ.ಐ.ಎ. ಬೆಂಬಲಿತ ಪಡೆಗಳು ಅಲ್ಲಿಂದೀಚಿನ ಮೂವತ್ತು-ನಲವತ್ತು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸ್ಥಳೀಯರನ್ನು ಕೊಂದವು.

ಚಿಲಿ ದೇಶದಲ್ಲಿ ವಿಧ್ಯುಕ್ತವಾಗಿ ಅಧಿಕಾರದಲ್ಲಿದ್ದ ಸಲ್ವಡಾರ್ ಆ್ಯಲೆಂಡೆ ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋನೊಡನೆ ಮೈತ್ರಿಯಿಂದಿದ್ದ 'ಅಪರಾಧ'ಕ್ಕಾಗಿ ಅಮೆರಿಕ ಆ್ಯಲೆಂಡೆಯ ವಿರುದ್ಧ ಕ್ಷಿಪ್ರಾಕ್ರಮಣವನ್ನೇರ್ಪಡಿಸಿ ೧೯೭೩ರ ಅಂತ್ಯದಲ್ಲಿ ಆಗಸ್ಟೋ ಪಿನೋಶೆಟ್‌ನನ್ನು ಗಾದಿಯಲ್ಲಿ ಕೂಡಿಸಿತು. ಅಲ್ಲಿಂದಾಚೆಯ ಹದಿನೇಳು ವರ್ಷಗಳ ಅವಧಿಯಲ್ಲಿ ಪಿನೋಶೆಟ್ ಪಡೆಗಳಿಂದ ಮರಣಕ್ಕೂ, ಚಿತ್ರಹಿಂಸೆಗೂ ಗುರಿಯಾದವರು ಎಷ್ಟು ಮಂದಿ ಎಂಬ ಲೆಕ್ಕವೂ ಸಿಗುತ್ತಿಲ್ಲ.

ಮೇಲೆ ಸ್ಮರಿಸಿದ್ದು ನಿದರ್ಶನಾರ್ಥ, ಅಷ್ಟೆ. ದಕ್ಷಿಣ ಅರ್ಜೆಂಟಿನಾ, ಆಫ್ರಿಕಾದ ಕಾಂಗೋ, ರಷ್ಯದ ಉಜ್‌ಬೆಕಿಸ್ತಾನ್, ಫಿಲಿಪೈನ್ಸ್ ಮೊದಲಾದ ಎಲ್ಲೆಡೆ ಅಮೆರಿಕ ಮಾಡಿದ್ದು ಇದೇ ಘನಂದಾರಿ ಕೆಲಸವನ್ನು. ವಿವರಿಸಹೊರಟರೆ 'ಬೋರ್' ಹೊಡೆಯುತ್ತದೆ. ದೇಶದ ಹೆಸರನ್ನು ಬದಲಾಯಿಸಿಕೊಂಡರೆ ಸಾಕಾಗುತ್ತದೆ.

ಕಳೆದ ಅರ್ಧ ಶತಮಾನದಲ್ಲಿ ಅಮೆರಿಕ ಎಲ್ಲೆಲ್ಲಿ ಸರ್ವಾಧಿಕಾರಗಳನ್ನು ಬೆಂಬಲಿಸಿ ಪೋಷಿಸಿದೆ ಎಂದು ಲೆಕ್ಕ ಹಾಕ ಹೊರಟರೆ ಜಗತ್ತಿನ ಅರ್ಧದಷ್ಟು ದೇಶಗಳನ್ನು ಹೆಸರಿಸಬೇಕಾದೀತು: ಮಧ್ಯ ಅಮೆರಿಕದಲ್ಲಿ ನಿಕರಾಗುವಾ,ಎಲ್ ಸಲ್ವಡಾರ್, ಹಾಂಡುರಾಸ್; ದಕ್ಷಿಣ ಅಮೆರಿಕದಲ್ಲಿ ಪನಾಮಾ, ಬ್ರೆಜಿಲ್, ಪರುಗ್ವೇ, ಬೊಲಿವಿಯಾ; ವೆಸ್ಟಿಂಡೀಸ್ ಕೆರಿಬಿಯನ್ ಭಾಗದಲ್ಲಿ ಹೇಯ್ಟಿ, ಡಾಮಿನಿಕನ್ ರಿಪಬ್ಲಿಕ್; ಯೂರೋಪಿನಲ್ಲಿ ಗ್ರೀಸ್, ಟರ್ಕಿ, ಸ್ಪೇಯ್ನ್, ಪೋರ್ತುಗಲ್; ಆಫ್ರಿಕಾದಲ್ಲಿ ನೈಜೀರಿಯ, ಮೊರಾಕ್ಕೊ, ರ್‍ಹೊಡೀಸಿಯ, ಲೈಬೀರಿಯ, ಇಥಿಯೋಪಿಯ; ಪೆಸಿಫಿಕ್ ಸಾಗರದಲ್ಲಿ ಫಿಲಿಪೈನ್ಸ್, ಬ್ರುನೈ, ಚೀನಾದ ಟೈವಾನ್; ಏಷ್ಯಾದಲ್ಲಿ ಸೌದಿ ಅರೇಬಿಯಾ, ದಕ್ಷಿಣ ಕೊರಿಯ, ಕಾಂಬೋಡಿಯ, ಪಾಕಿಸ್ತಾನ. ಈ ಪಟ್ಟಿಯೂ ಸಮಗ್ರವೇನಲ್ಲ.

ತನ್ನ ಎಲ್ಲ ವಿಧ ವ್ಯಾಪಾರ-ವಹಿವಾಟುಗಳನ್ನು ಬೆಳೆಸಿಕೊಳ್ಳಲು ಜಟಿಲವಾದ ಪ್ರಜಾಪ್ರಭುತ್ವಗಳೊಡನೆ ಏಗುವುದಕ್ಕಿಂತ ಒಬ್ಬ ಸರ್ವಾಧಿಕಾರಿಯನ್ನು ಬುಟ್ಟಿಗೆ

ಹಾಕಿಕೊಳ್ಳುವುದು ಸುಲಭದ ಮಾರ್ಗ–ಎಂಬುದು ಅಮೆರಿಕದ ಅಭಿಪ್ರಾಯವೂ ಅನುಭವವೂ ಆಗಿದೆ.

ವಸ್ತುಸ್ಥಿತಿಯೆಂದರೆ ಅಮೆರಿಕದ ಪಾಳೆಗಾರಿಕೆಗೂ ಶ್ರೀಮಂತಿಕೆಗೂ ಮುಖ್ಯ ಅವಲಂಬವಾಗಿರುವುದು ಯುದ್ಧಗಳೇ. ಯುದ್ಧಗಳು ಸತತ ನಡೆದು ಎರಡೂ ಪಕ್ಷಗಳು ಅಮೆರಿಕ–ನಿರ್ಮಿತ ಯುದ್ಧಸಾಮಗ್ರಿಗಳನ್ನು ಧಾರಾಳವಾಗಿ ಕೊಳ್ಳುತ್ತಿದ್ದರೆಯೇ ಅಮೆರಿಕದ ಸಂಪನ್ನತೆ **ಮುಂ**ದುವರಿಯುವುದು. ಅಮೆರಿಕದ ಧನಬಲದ ಮೂಲವಿರುವುದು ವಿಜ್ಞಾನ ತಂತ್ರಜ್ಞಾನಾದಿ ಪ್ರಗತಿ ಮೊದಲಾದವಕ್ಕಿಂತ ಬಹುಪಾಲು ಅಧಿಕವಾಗಿ ಅದರ ಯುದ್ಧಾಸ್ತ್ರ ತಯಾರಿಕೆ ಮತ್ತು ಮಾರಾಟದಲ್ಲಿ. ವಿವಿಧ ರಾಷ್ಟ್ರಗಳು ತಮ್ಮ ಸೇನಾವೆಚ್ಚವನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗಬೇಕಾದ ಸ್ಥಿತಿಯನ್ನು ಪೋಷಿಸಿರುವುದು ಅಮೆರಿಕ. ಅಮೆರಿಕದ ಹೊಟ್ಟೆ ತುಂಬಬೇಕಾದರೆ ಬೇರೆಲ್ಲಿಯೊ ಯುದ್ಧ ನಡೆಯಲೇಬೇಕು. ದಶಕಗಳುದ್ದಕ್ಕೂ ಅಮೆರಿಕ ಅನುಸರಿಸುತ್ತ ಬಂದಿರುವ 'ವಿದೇಶಾಂಗ ನೀತಿ' ಇದೇ.

ಕಳೆದ ಏಪ್ರಿಲ್ ಎರಡನೆ ವಾರದ ಒಂದು 'ಲೆಟರ್‌ಮನ್ ಪ್ರಸಾರ ಅಂಕಣ' ದ ವ್ಯಂಗ್ಯೋಕ್ತಿ ಹೀಗಿತ್ತು: ಸಂಸತ್ತಿನಿಂದ ಜಾರ್ಜ್‌ಬುಶ್ ಸೇನಾವೆಚ್ಚಕ್ಕಾಗಿ ಹೆಚ್ಚುವರಿ ೮೨ ಬಿಲಿಯನ್ ಡಾಲರುಗಳ ಅನುಮೋದನೆ ಕೇಳಿದನಂತೆ ಮೂರು ಅಭಿಯಾನಗಳಿಗಾಗಿ: "ಅಫಘಾನಿಸ್ತಾನ, ಇರಾಕ್ ಅಂತೂ ಇದ್ದೇ ಇವೆ. ಮೂರನೆಯ ಯುದ್ಧ ಯಾರ ಮೇಲೆಂದು ನಾನಿನ್ನೂ ನಿರ್ಧರಿಸಿಲ್ಲ–ಆಮೇಲೆ ತಿಳಿಸುತ್ತೇನೆ".

ಖ್ಯಾತ ಅರ್ಥಶಾಸ್ತ್ರಜ್ಞರೂ ಹಿಂದೆ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದವರೂ ಆದ ಜಾನ್ ಕೆನ್ನತ್ ಗಾಲ್‌ಬ್ರೇತ್ ಇತ್ತೀಚೆಗೆ ನೀಡಿದ ವಿಶ್ಲೇಷಣೆ ಇದು:

"ಹಿಂದೆ ಸರ್ಕಾರಿ ಉದ್ಯಮವಲಯಕ್ಕೆ ಇದ್ದ ಸ್ಥಾನವನ್ನು ಈಗ ಖಾಸಗಿ ಲಾಭಕೋರ ಕಂಪನಿಗಳು ಸ್ವಾಯತ್ತ ಮಾಡಿಕೊಂಡಿವೆ. ಹೆಚ್ಚು ಹಣದ ವಹಿವಾಟು ಇರುವ ಸೇನಾಸಂಬಂಧಿತ ವ್ಯವಹಾರದಲ್ಲಿಯೆ ಇವುಗಳ ಮುಖ್ಯ ಆಸಕ್ತಿ. ಈ ಹಿತಾಸಕ್ತಿಯ ಕಾರ್ಯಾನ್ವಯವೇ ಈಗ 'ವಿದೇಶಾಂಗ ನೀತಿ' ಎಂದು ಕರೆಸಿಕೊಳ್ಳುತ್ತಿದೆ. ಈ ಏರ್ಪಾಡು ಅಮಲಿನಲ್ಲಿ ಇರುವುದರಿಂದ ಯುದ್ಧಗಳು ಆಗುತ್ತಲೇ ಇರುವುದು ನಿಶ್ಚಿತ!"

ಅಫಘಾನಿಸ್ತಾನದ ಮತ್ತು ಇರಾಕಿನ ಧ್ವಂಸದ ನಂತರ ಆ ದೇಶಗಳ ಪುನರ್ನಿರ್ಮಾಣದ ಕಾಂಟ್ರ್ಯಾಕ್ಟುಗಳನ್ನು ಜಾರ್ಜ್ ಬುಶ್ ಕೊಟ್ಟಿರುವುದು ಹಿಂದೆ ತನ್ನ ಚುನಾವಣಾ ಪ್ರಚಾರಕ್ಕೆ ಅಧಿಕ ದೇಣಿಗೆ ನೀಡಿದ್ದ ಕಂಪನಿಗಳಿಗೇ, ಹೀಗೆ ಎಪ್ಪತ್ತು ಅಮೇರಿಕನ್ ಕಂಪನಿಗಳು ೮ ಬಿಲಿಯನ್ ಡಾಲರುಗಳಷ್ಟು ಆರ್ಡರುಗಳನ್ನು ಗಿಟ್ಟಿಸಿಕೊಂಡವು. ಇವುಗಳಲ್ಲಿ ಅತ್ಯಧಿಕ ಗಾತ್ರದ ಕಾಂಟ್ರ್ಯಾಕ್ಟನ್ನು (ಸು.೨೩ ಬಿಲಿಯನ್ ಡಾಲರುಗಳಷ್ಟು) ಪಡೆದದ್ದು ಬುಶ್‌ನ ಉಪಾಧ್ಯಕ್ಷ ಡಿಕ್ ಚೆನೀ ಹಿಂದೆ ಅಧಿಕಾರಿಯಾಗಿದ್ದ ಹ್ಯಾಲಿಬರ್ಟನ್ ಹಾಗೂ ಅದರ ಅಂಗಸಂಸ್ಥೆಗಳು.(ಕಳೆದ ದಶಕದಲ್ಲಿ ಇವು ಬುಶ್ ಪಕ್ಷಕ್ಕೆ ಹತ್ತಿರ ಹತ್ತಿರ ಇಪ್ಪತ್ತನಾಲ್ಕು ಲಕ್ಷ ಡಾಲರುಗಳಷ್ಟು

ದೇಣಿಗೆ ಕೊಟ್ಟಿದ್ದವು.) ಇದೀಗ ಅಫಘಾನಿಸ್ತಾನ ಇರಾಕ್‌ಗಳ ಪುನರ್‌ನಿರ್ಮಾಣಕ್ಕಾಗಿ ಹತ್ತಿರ ಹತ್ತಿರ ೨೭ ಕೋಟಿ ಡಾಲರ್ ಮೌಲ್ಯದ ಕಾಂಟ್ರ್ಯಾಕ್ಟುಗಳನ್ನು ಪಡೆದಿರುವ ಬೆಖೆಲ್ ಸಮೂಹ ಕಂಪನಿಗಳು ಬುಶ್ ಪಕ್ಷಕ್ಕೆ ಮೂವತ್ತಮೂರು ಲಕ್ಷ ಡಾಲರಿಗೂ ಹೆಚ್ಚಿನ ದೇಣಿಗೆ ನೀಡಿದ್ದವು.

ಅಮೆರಿಕದ ಪ್ರತಿಷ್ಠಿತ ಪತ್ರಿಕೆ 'ವಾಷಿಂಗ್ಟನ್ ಪೋಸ್ಟ್' ಇತ್ತೀಚೆಗೆ ಮಾಡಿದ ವ್ಯಾಖ್ಯಾನ ಇದು:

"ಪಾಕಿಸ್ತಾನಕ್ಕೆ ಅಮೆರಿಕ ಎಫ್-೧೬ ಯುದ್ಧವಿಮಾನಗಳನ್ನು ಮಾರಲು ನಿರ್ಧರಿಸಿರುವುದು ಇಸ್ಲಾಮಾಬಾದಿಗಿಂತ ಪೋರ್ಟ್‌ವರ್ತಗೇ ಹೆಚ್ಚು ಖುಶಿ ಕೊಟ್ಟಿರಬೇಕು(ಎಂದರೆ ಲಾಕ್‌ಹೀಡ್-ಮಾರ್ಟಿನ್ ಕಂಪನಿಗೆ). ಏಕೆಂದರೆ ಲಾಕ್‌ಹೀಡ್-ಮಾರ್ಟಿನ್ ಕಾರ್ಪೊರೇಷನ್ನಿಗೆ ಇದೀಗ ತುರ್ತು ಆರ್ಡರುಗಳು ಬೇಕಾಗಿದೆ. ಕೂಡಲೆ ಆರ್ಡರುಗಳು ದೊರೆಯದಿದ್ದಲ್ಲಿ ಲಾಕ್‌ಹೀಡ್-ಮಾರ್ಟಿನ್ ತನ್ನ ಕಾರ್ಖಾನೆಯನ್ನು ಮುಚ್ಚಿ ೫,೦೦೦ ಜನರನ್ನು ಕೆಲಸದಿಂದ ತೆಗೆಯಬೇಕಾಗುತ್ತದೆ"

ಇದುವರೆಗೆ ಅಮೆರಿಕ ದೇಶಾಂತರಗಳಲ್ಲಿ ನಡೆಸಿರುವ ಯುದ್ಧಗಳೆಲ್ಲ ಅಮೆರಿಕ ಸರ್ಕಾರದ ಬೆನ್ನೆಲುಬಾದ ಬ್ಯಾಂಕಿಂಗ್ ಹಣದ ಕಾರ್ಟೆಲಿನ ವಹಿವಾಟುಗಳ ವರ್ಧನೆಗಾಗಿಯೇ ನಡೆದವೇ ಹೊರತು ಬೇರಾವ ತಾತ್ತ್ವಿಕ ಕಾರಣಗಳಿಗಾಗಿಯೂ ಅಲ್ಲ. ಕ್ಲಿಂಟನನದಾಗಲಿ ಬುಶ್‌ನದಾಗಲಿ, ನಾಮಮಾತ್ರಕ್ಕೆ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ, ಅಲ್ಲಿಯ ಹಣದ ಕಾರ್ಟೆಲಿನ ಪ್ರಾಬಲ್ಯಕ್ಕೆ ಮಾತ್ರ ಎಂದಿಗೂ ಚ್ಯುತಿ ಬರುವುದಿಲ್ಲ. ಈ ವ್ಯವಸ್ಥೆ ಒಂದು 'ಬಹಿರಂಗ ರಹಸ್ಯ'. ಕ್ಲಿಂಟನ್ ಅವಧಿ ಮುಗಿದು ಬುಶ್ ಸರ್ಕಾರ ಗಾದಿಗೇರಿದ ಮೇಲೂ ಐನಾತಿ ಅಧಿಕಾರಸ್ಥಾನಗಳಲ್ಲಿ ಏನೂ ಬದಲಾವಣೆಯಾಗಲಿಲ್ಲ.comptroller of currency ಆಗಿದ್ದ ಜಾನ್‌ಡಿ.ಹಾಕ್,comptroller General ಆಗಿದ್ದ ಡೇವಿಡ್ ವಾಕರ್, ಸಿ.ಐ.ಎ. ನಿರ್ದೇಶಕನಾಗಿದ್ದ ಜಾರ್ಜ್ ಟೆನೆಟ್-ಎಲ್ಲರೂ ಯಥಾಸ್ಥಿತಿ ಮುಂದುವರೆದಿದ್ದರು. ಅಮೆರಿಕ ಸರ್ಕಾರದ ಹಣದ ವಹಿವಾಟಿನ ಅತ್ಯಧಿಕ ಭಾಗವನ್ನು ನಿಯಂತ್ರಿಸುವ ರಕ್ಷಣಾ ಇಲಾಖೆ, ಸಿ.ಐ.ಎ., 'ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್' (ಎಚ್.ಯು.ಡಿ.) ಇಲಾಖೆ- ಮೊದಲಾದವುಗಳ ಆದಾಯ- ವ್ಯಯಗಳೆಲ್ಲ ಸಂಸತ್ತಿನ ಪರೀಕ್ಷಣಾಧಿಕಾರದಿಂದ ಹೊರಗಿರಿಸಲ್ಪಟ್ಟಿವೆ.

ಇನ್ನೊಂದು 'ಬಹಿರಂಗ ರಹಸ್ಯ' ವೆಂದರೆ ಅಮೆರಿಕ ಸರ್ಕಾರದ 'Financial control and accounting systems'ರಚನೆಯನ್ನು ಏರ್ಪಡಿಸಿರುವುದು ಸರ್ಕಾರದ ಪ್ರಮುಖ ಮಿಲಿಟರಿ ಸಾಧನಗಳನ್ನೂ ಎಫ್-೨೨ ಮೊದಲಾದ ಯುದ್ಧವಿಮಾನಗಳನ್ನೂ ಸರಬರಾಜು ಮಾಡುವ ಲಾಕ್‌ಹೀಡ್ ಮಾರ್ಟಿನ್ ಕಂಪನಿಯೇ! ನ್ಯಾಯಾಂಗವೂ (ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್) ಸೇರಿದಂತೆ ಅಮೆರಿಕ ಸರ್ಕಾರದ ವಿವಿಧ ಇಲಾಖೆಗಳಿಗೆ ಮಾಹಿತಿ ತಂತ್ರಜ್ಞಾನ

(ಇನ್‌ಫರ್ಮೇಷನ್ ಟೆಕ್ನಾಲಜಿ) ಸಾಧನಗಳನ್ನು ಒದಗಿಸುವುದು ರಕ್ಷಣಾ ಮತ್ತು ಮಿಲಿಟರಿ ಉಪಕರಣಗಳನ್ನೂ ವ್ಯವಸ್ಥೆಗಳನ್ನೂ ಏರ್ಪಡಿಸುವ Dyncorp (ಈಗ 'ಕಂಪ್ಯೂಟರ್ ಸಯನ್ಸಸ್ ಕಾರ್ಪೊರೇಷನ್.) ಡಿನ್‌ಕಾರ್ಪ್‌ನ ಪ್ರಮುಖ ಹರ್ಬರ್ಟ್ ವಿನೋಕರ್ 'ಎಚ್.ಯು.ಡಿ.ಯ ಅಪಾರ ಹಣ ಹೂಡಿಕೆಯನ್ನು ನಿಯಂತ್ರಿಸುವ ಹಾರ್ವರ್ಡ್ ಮ್ಯಾನೆಜ್‌ಮೆಂಟ್ ಕಾರ್ಪೊರೇಷನ್ನಿನ ಆಡಳಿತ ಮಂಡಳಿ ಸದಸ್ಯನೂ ಆಗಿದ್ದ, ಕುಖ್ಯಾತ 'ಎನ್ರಾನ್' ಕಂಪನಿಯ ನಿರ್ದೇಶಕನೂ ಆಗಿದ್ದ. ಹೀಗೆ ಯಾರ ನಡಾವಳಿಗಳು ಪರಿಕ್ಷಾರ್ಹವಾಗಿವೆಯೋ ಆ ವಹಿವಾಟುಗಳ ಸೂತ್ರಧಾರಿಗಳೇ ಸರ್ಕಾರದ ಉಸ್ತುವಾರಿ ಅಧಿಕಾರಿಗಳೂ ಆಗಿರುತ್ತಾರೆ ಅಮೆರಿಕದಲ್ಲಿ! ಈ 'ವ್ಯವಸ್ಥೆ'ಯಿಂದಾಗಿ ಅಮೆರಿಕ ಸರ್ಕಾರದ ಮಿಲಿಟರಿ ರಕ್ಷಣಾ ಸಂಬಂಧಿತ ಮತ್ತಿತರ ವಹಿವಾಟುಗಳಾವುವೂ ಸರ್ಕಾರಿ ಹಣಕಾಸು ವರದಿಗಳಲ್ಲಿ ಎಂದೂ ಪ್ರತಿಬಿಂಬಿತವಾಗುವುದಿಲ್ಲ. ೨೦೦೧ ರ ವೇಳೆಗೇ ಇಂಥ 'Undoccumentable transactions'೩.೪ ಟ್ರಿಲಿಯನ್ ಡಾಲರಿನಷ್ಟು ಅಧಿಕವಾಗಿದ್ದವು. ಸಿ.ಐ.ಎ.ಯಂತೂ ತನಗೆ ಎಷ್ಟು ಬೇಕೊ ಅಷ್ಟು ಹಣವನ್ನು ನಿಸ್ಸಂಕೋಚವಾಗಿ ಬಳಸುತ್ತ ಹೋಗಬಹುದೆಂದು ಅದರ ಸಂವಿಧಾನದಲ್ಲಿಯೇ(CIA Act of ೧೯೪೯)ಹೇಳಿದೆ. "...Without regard to the provisions of law and regulations relating to the expenditure of government funds". ಸರ್ಕಾರದ ಅಧಿಕ ಹಣದ ವಹಿವಾಟಿನ ಇಲಾಖೆಗಳಿಗೆ ಸಿ.ಐ.ಎ. ಅಧಿಕಾರಿಗಳನ್ನೂ ರಕ್ಷಣಾ ಇಲಾಖೆಯ ಅಧಿಕಾರಿಗಳನ್ನೂ ಅಂತೆಯೇ ಸಿ.ಐ.ಎ. ಗೆ ನಾಗರಿಕ ವಿಭಾಗಗಳ ಅಧಿಕಾರಿಗಳನ್ನೂ ವರ್ಗಾಯಿಸುತ್ತ ಅಮೆರಿಕ ಸರ್ಕಾರ ತನ್ನ ಹಿಂದಿರುವ ಹಣದ ಕಾರ್ಟೆಲ್ 'ಅಧಿಸರ್ಕಾರ'ವನ್ನೂ ಸದಾ ದುರಸ್ತಾಗಿಟ್ಟಿರುತ್ತದೆ. ಎನ್ರಾನ್ ಕಂಪನಿಯಲ್ಲಿ ಇಪ್ಪತ್ತು ಮಂದಿ ಸಿ.ಐ.ಎ. ಅಧಿಕಾರಿಗಳು ಉದ್ಯೋಗಸ್ಥರಾಗಿದ್ದರು. ಸರ್ಕಾರದ ಆರ್ಥಿಕ ವಹಿವಾಟುಗಳ ಅತ್ಯಧಿಕ ಭಾಗವನ್ನೂ ಯುದ್ಧಸಂಬಂಧಿತ ಖರ್ಚುವೆಚ್ಚಗಳನ್ನೂ ಸಾರ್ವಜನಿಕ ಸಂಸದೀಯ ಉಸ್ತುವಾರಿಯಿಂದ ಹೊರಗಿರಿಸುವುದಕ್ಕಾಗಿಯೇ 'ಫೆಡರಲ್ ರಿಜರ್ವ್'(೧೯೧೪), 'ಎಕ್ಸ್‌ಚೇಂಜ್ ಸ್ಟೆಬಿಲಿಜೇಷನ್ ಫಂಡ್' (೧೯೨೪), 'ನ್ಯಾಷನಲ್ ಸೆಕ್ಯುರಿಟಿ ಆ್ಯಕ್ಟ್' (೧೯೪೭) ಮೊದಲಾದ ರಚನೆಗಳನ್ನು ಸಂಸ್ಥೀಕರಿಸಲಾಯಿತು. ಅಮೆರಿಕದ ಆರ್ಥಿಕತೆಗೆ ಇನ್ನೂ ಹಲವಾರು ಮುಖಗಳಿವೆ; ಮಾದಕದ್ರವ್ಯ ವಹಿವಾಟಿನಿಂದ ಉತ್ಪಾದಿತವಾದ ಹಣವನ್ನು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಸಭ್ಯಗೊಳಿಸುವುದು, ಇತ್ಯಾದಿ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಜಗತ್ತಿನ ವಿವಿಧೆಡೆಗಳಲ್ಲಿ ಯುದ್ಧಗಳನ್ನು ಪೋಷಿಸುವುದೂ ಶಾಂತಿಗೆ ಅವಕಾಶ ಕೊಡದಿರುವುದೂ ಅಮೆರಿಕಕ್ಕೆ ಆದ್ಯತೆಯ ವಿಷಯ. ಇದನ್ನು ಮರೆತು ಅಮೆರಿಕದ ನಡಾವಳಿಗಳನ್ನು ವಿಶ್ಲೇಷಿಸಲೆಳಸುವುದು ನಿರರ್ಥಕ. ಅಮೆರಿಕದ ಪಾಕಿಸ್ತಾನ-ಪರ ಪಕ್ಷಪಾತವೂ ಈ ಕಕ್ಷೆಗೇ ಸೇರಿದುದು. ಪಾಕಿಸ್ತಾನಕ್ಕೆ ಮತ್ತು ಭಾರತಕ್ಕೆ-ಇಬ್ಬರಿಗೂ

ಯುದ್ಧವಿಮಾನಗಳನ್ನೂ ಮತ್ತಿತರ ಸಾಧನಗಳನ್ನೂ ಅಧಿಕ ಪ್ರಮಾಣದಲ್ಲಿ ಮಾರಾಟ ಮಾಡಲು ಅಮೆರಿಕ ದೀರ್ಘಕಾಲದಿಂದ ತವಕಿಸಿದೆ. ಕಾಶ್ಮೀರದ ಬಗ್ಗೆ ಅಮೆರಿಕ ತಳೆಯುತ್ತ ಬಂದಿರುವ ಅತಾರ್ಕಿಕ ಧೋರಣೆಯೂ ಅದರ ಮೂಲ ಗುರಿಯ ಅನುಸರಣೆಯ ಅಂಗವೇ.

ಕಳೆದ ಒಂದೂವರೆ ದಶಕದಿಂದ ಎಫ್-೧೬ ಜೆಟ್ ಯುದ್ಧವಿಮಾನಗಳನ್ನು ಪಾಕಿಸ್ತಾನಕ್ಕೆ ಮಾರಾಟ ಮಾಡಲು ಅಮೆರಿಕ ಉತ್ಸುಕವಾಗಿತ್ತು. ೧೯೯೦ ರಲ್ಲಿಯೇ ೨೮ ಎಫ್-೧೬ ವಿಮಾನಗಳನ್ನು ಮಾರಲು ಅಮೆರಿಕ ನಿರ್ಧರಿಸಿತ್ತು. ಆದರೆ ಲಾರಿ ಪ್ರೆಸ್ಲರ್ (ಆಗ ಸಂಸತ್ತಿನ ವಿದೇಶಾಂಗ ವ್ಯವಹಾರ ಸಮಿತಿಯ ಸದಸ್ಯರಾಗಿದ್ದವರು; ಈಗ ಸೌತ್ ಡಕೋಟಾ ಪ್ರಾಂತದ ರಿಪಬ್ಲಿಕನ್ ಸಾಂಸದ) ಮುಂದೊತ್ತಿದ ತಿದ್ದುಪಡಿಯ ಕಾರಣದಿಂದಾಗಿ ಅದಕ್ಕೆ ತಡೆ ಬಿದ್ದಿತ್ತು.

ಭಯೋತ್ಪಾದಕತೆಯ ವಿರುದ್ಧದ ಜಾಗತಿಕ ಸಮರದಲ್ಲಿ ಪಾಕಿಸ್ತಾನ ತನ್ನ ಸಹಕಾರಿ ಎಂಬುದು ಅಮೆರಿಕ ಸರ್ಕಾರದ ಘೋಷಣೆ. ಈ ವಾದದ ಅನುಸಾರ ಪಾಕಿಸ್ತಾನಕ್ಕೆ ಅಮೆರಿಕ ಯಥೇಷ್ಟ ಹಣ ಕೊಟ್ಟಿದೆ. ಆದರೆ ತಾಲಿಬಾನ್ ಬಣಗಳನ್ನಾಗಲಿ ಅಲ್-ಖೈದಾ ಬಣಗಳನ್ನಾಗಲಿ ಎದುರಿಸಬೇಕಾಗಿರುವಾಗ ಈ ಜೆಟ್ ಯುದ್ಧವಿಮಾನಗಳಿಗೆ ಏನು ಕೆಲಸ ಇರುತ್ತದೆ? ಅಮೆರಿಕದ ಚಿಂತನೆಯ ಹಿಂದಿರುವುದು ಭಾರತ-ಪಾಕಿಸ್ತಾನ ಸಂಬಂಧಗಳ ವಿಷಯದಲ್ಲಿ ಅದಕ್ಕೆ ಇರುವ ಗ್ರಹಿಕೆಯೇ ಎಂಬುದು ನಿಸ್ಸಂದೇಹ.

ಅಮೆರಿಕ ಒಂದು ಕೈಯಲ್ಲಿ ಪಾಕಿಸ್ತಾನಕ್ಕೆ ಎಫ್-೧೬ ಯುದ್ಧವಿಮಾನಗಳನ್ನು ಮಾರಿ ಇನ್ನೊಂದು ಕಡೆ ಭಾರತಕ್ಕೆ "ಪಾಕಿಸ್ತಾನ ಕೊಂಡಿರುವುದಕ್ಕಿಂತ ಹೆಚ್ಚು ಯುದ್ಧವಿಮಾನಗಳನ್ನು ನೀವು ನಮ್ಮಿಂದ ಕೊಂಡುಕೊಳ್ಳಿ. ಬೇಕಾದರೆ ಒಂದಷ್ಟು 'ಪೇಟ್ರಿಯಟ್' ಕ್ಷಿಪಣಿಗಳನ್ನೂ ನಿಮಗೆ ಮಾರಿಯೇವು. ಆಗ ನಿಮಗೆ ಪಾಕಿಸ್ತಾನದಿಂದ ಯಾವ ಭಯವೂ ಇರುವುದಿಲ್ಲ" ಎಂದು ಹೇಳುತ್ತಿದೆ.

ಪಾಕಿಸ್ತಾನ ಸರ್ಕಾರಕ್ಕೆ ಸುಭದ್ರತೆಯ ಭರವಸೆ ಮೂಡಿಸುವುದಕ್ಕಾಗಿ ಎಫ್-೧೬ ಜೆಟ್ ಯುದ್ಧವಿಮಾನಗಳನ್ನು ಸರಬರಾಜು ಮಾಡುತ್ತಿರುವುದಾಗಿ ಅಮೆರಿಕ ಸರ್ಕಾರ ಘೋಷಿಸಿತು("(to make) the pakistani people and government feel secure")ಆದರೆ ಭಾರತಕ್ಕೆ ಎಫ್-೧೬ ಮತ್ತು ಎಫ್-೧೮ ಯುದ್ಧವಿಮಾನಗಳನ್ನು ಮಾರುವುದಕ್ಕೆ ಲಾಕ್‌ಹೀಡ್- ಮಾರ್ಟಿನ್ ಮತ್ತು ಬೋಯಿಂಗ್ ಕಂಪನಿಗಳಿಗೆ ತಾನು ಅನುಮತಿ ನೀಡುತ್ತಿರುವುದಾಗಿಯೂ ಅಮೆರಿಕ ಸರ್ಕಾರ ಹೇಳಿದೆ. ಈ ನಡಾವಳಿಯಿಂದ ಪಾಕಿಸ್ತಾನ ಸರ್ಕಾರಕ್ಕೆ ಸುರಕ್ಷತತೆಯ ಭರವಸೆ ಹೇಗೆ ಮೂಡೀತು?

೨೦೦೩ರಲ್ಲಿ ಮುಷರ್ರಫ್‌ರನ್ನು ಕ್ಯಾಂಪ್ ಡೇವಿಡ್‌ಗೆ ಆಮಂತ್ರಿಸಿದ್ದಾಗ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಬುಶ್ ಆಗ್ರಹಿಸಬಹುದಿತ್ತು. ಹಾಗೆ ಮಾಡಲಿಲ್ಲ. ಕಳೆದ (೨೦೦೫) ಮಾರ್ಚ್ ಮಧ್ಯಭಾಗದಲ್ಲಿ ಅಮೆರಿಕದ ಗೃಹಸಚಿವೆ

ಕಾಂಡಲೀಜಾ ರೈಸ್ ಭೇಟಿಯಿತ್ತಾಗ "೨೦೦೭ರ ವೇಳೆಗಾದರೂ ಪಾಕಿಸ್ತಾನದಲ್ಲಿ ವಿಹಿತ ಚುನಾವಣೆ ನಡೆಯಬೇಕು" ಎಂದೆಲ್ಲ ಸ್ವಸ್ತಿವಾಚನ ಮಾಡಿದರು. ಆದರೆ ಈ ದಿಶೆಯ ಯಾವುದೇ ಭರವಸೆ ಪಾಕಿಸ್ತಾನದಿಂದ ಆಕೆಗೆ ದೊರೆಯಲಿಲ್ಲ.

ಒಂದು ಕಡೆ ದೃಢವಾದ ಸಂಸದೀಯ ಪ್ರಜಾಪ್ರಭುತ್ವವೂ ವಿಶಾಲ ಮುಕ್ತ ಮಾರುಕಟ್ಟೆಯೂ ಸ್ಥಿರತೆಯೂ ಪೂರ್ವ ಏಷ್ಯದಲ್ಲಿ ಚೀನಾಕ್ಕೆ ಪ್ರತಿಭಾರವಾಗಬಲ್ಲ ಸಾಮರ್ಥ್ಯವೂ ಈಗಾಗಲೆ ಅಮೆರಿಕದೊಡನೆ ಆರೋಗ್ಯಕರ ವಾಣಿಜ್ಯ ಸಂಬಂಧಗಳೂ ಇರುವ ಭಾರತ. ಇನ್ನೊಂದು ಕಡೆ ಸರ್ವಾಧಿಕಾರವೂ ವ್ಯಾಪಕ ಭ್ರಷ್ಟಾಚಾರವೂ ಮಾನವೀಯ ಹಕ್ಕುಗಳ ನಿರಂತರ ದಮನವೂ ಇರುವ ಪಾಕಿಸ್ತಾನ; ಮತ್ತು ಅಮೆರಿಕದ ಘೋಷಿತ ವಿರೋಧಿಗಳಿಗೇ ವರ್ಷಗಳುದ್ದಕ್ಕೂ ಪಾಕಿಸ್ತಾನವು ಅಣ್ವಸ್ತ್ರ ಸಾಧನಗಳನ್ನು ಮಾರಾಟ ಮಾಡುತ್ತ ಬಂದಿದೆ. ಹೀಗಿದ್ದರೂ ಪಾಕಿಸ್ತಾನವನ್ನು ಅಮೆರಿಕ ಓಲೈಸುವುದೇಕೆ?

ಇದಕ್ಕೆ ಕಾರಣವನ್ನು ಇತ್ತೀಚೆಗೆ (೨೦೦೫) ಮಾರ್ಚ್ ಮೂರನೆಯ ವಾರ) 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಗೆ ಬರೆದ ಲೇಖನದಲ್ಲಿ ಲಾರಿ ಪ್ರೆಸ್ಲರ್ ಸ್ಫುಟೀಕರಿಸಿದ್ದಾರೆ, ಹೀಗೆ:

"ಅಮೆರಿಕದ ವಿದೇಶಾಂಗ ಧೋರಣೆಯನ್ನು ನಿಯಂತ್ರಿಸುವ ಯುದ್ಧೋದ್ಯಮ ವಲಯವು ಪಾಕಿಸ್ತಾನದ ಪರವಾಗಿದೆ. ಏಕೆಂದರೆ ಪಾಕಿಸ್ತಾನಕ್ಕೆ ಯುದ್ಧಸಾಮಗ್ರಿಗಳನ್ನು ನಾವು ಮಾರಬಲ್ಲೆವು. ಇದಕ್ಕಿಂತ ಮಿಗಿಲಾಗಿ: ಅಮೆರಿಕಕ್ಕೆ ಪ್ರಜಾಪ್ರಭುತ್ವ ಸರ್ಕಾರಗಳೊಡನೆ ವ್ಯವಹರಿಸುವುದಕ್ಕಿಂತ ಸರ್ವಾಧಿಕಾರಿಗಳೊಡನೆ ವ್ಯವಹರಿಸುವುದು ಸುಲಭವೆನಿಸಿದೆ. ಅಮೆರಿಕ ಸರ್ಕಾರದ ಅಧಿಕಾರಿ ಪಾಕಿಸ್ತಾನಕ್ಕೆ ಭೇಟಿಕೊಟ್ಟರೆ ಒಬ್ಬ ದಂಡನಾಯಕನೊಡನೆ ಮಾತುಕತೆ ನಡೆಸಿದರೆ ವ್ಯವಹಾರ ಮುಗಿಸಿಬಿಡಬಹುದು. ಇದಕ್ಕೆ ಬದಲಾಗಿ ಭಾರತಕ್ಕೆ ಹೋದರೆ ಪ್ರಧಾನಮಂತ್ರಿ, ಸಂಸತ್ತು, ನ್ಯಾಯಾಲಯಗಳು ಎಲ್ಲರನ್ನೂ ಒಪ್ಪಿಸಬೇಕಾಗುತ್ತದೆ; ಸಾಲದೆಂಬಂತೆ-ಗ್ರಹಚಾರ ಕೆಟ್ಟಿದ್ದರೆ-ಮುಕ್ತ ಪತ್ರಿಕಾಮಾಧ್ಯಮವನ್ನು ಕೂಡ ಸಮಾಧಾನಪಡಿಸಬೇಕಾಗುತ್ತದೆ.

ಬುಶ್ ಸರ್ಕಾರವು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಿಗೆ ತನ್ನ ವಿದೇಶಾಂಗ ನೀತಿಯಲ್ಲಿ ಮಹತ್ತ್ವ ಕೊಡುವುದಾಗಿ ಹೇಳಿರುವುದೇನೊ ಸಮಂಜಸವೇ. ಆದರೆ ಎಲ್ಲಿಯವರೆಗೆ ನಾವು ಭಾರತದಂಥ ಮುಕ್ತ ದೇಶಗಳನ್ನು ಅಲಕ್ಷಿಸಿ ಪಾಕಿಸ್ತಾನದಂಥ ಸರ್ವಾಧಿಕಾರಗಳನ್ನೇ ಬೆಂಬಲಿಸುತ್ತ ಹೋಗುತ್ತೇವೆಯೊ ಅಲ್ಲಿಯವರೆಗೆ ಜಗತ್ತು ನಮ್ಮ ಮಾತು-ಘೋಷಣೆಗಳನ್ನು ಗಂಭೀರವಾಗಿ ಪರಿಗಣಿಸದೆ ಅಲಕ್ಷಿಸುತ್ತದೆ. ಮತ್ತು ಆ ತಿರಸ್ಕಾರ ಸತರ್ಕವೂ ಆಗಿರುತ್ತದೆ."

ಅಮೆರಿಕದ 'ವಿದೇಶಾಂಗ ನೀತಿ'ಯ ಸ್ವರೂಪವನ್ನು ಇದಕ್ಕಿಂತ ಸ್ಪಷ್ಟ ಶಬ್ದಗಳಲ್ಲಿ ನಿರೂಪಿಸುವುದು ಕಷ್ಟ.

(ಸಾಭಾರ-ಉತ್ಥಾನ)

# ಮಲೆಯಾಳಂ ಮಹಾಲೇಖಕ ಬಷೀರರೊಂದಿಗೆ ಕನ್ನಡ ಸಾಹಿತಿಯ ಭೇಟಿ

-ಶ್ರೀಕೃಷ್ಣ ಆಲನಹಳ್ಳಿ

**ನಾ**ನು ಬಷೀರರ 'ಚೌಕಟ್ಟಿನ ಮನೆ'ಯ ಮೂಲಕ ಮಲೆಯಾಳಂ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದೆ. ಅದೇ ವರ್ಷ ಅಂದರೆ ೧೯೨೭ ರಲ್ಲಿಯೇ ನನಗೆ ಇನ್ನೊಂದು ಮಲೆಯಾಳಂ ಕೃತಿ ಸಿಕ್ಕಿತು. ಅದರಲ್ಲಿ ಎರಡು ನೀಳ್ಗತೆಗಳಿದ್ದವು. ಒಂದು 'ಪಾತುಮ್ಮನ ಆಡು' ಇನ್ನೊಂದು 'ಬಾಲ್ಯಕಾಲ ಸಖಿ'. ಇವು ನನ್ನ ಕಣ್ಣೆದುರು ತೆರೆದಿಟ್ಟ ಲೋಕ, ಈ ತನಕ ನಾನು ಕಂಡಿರದಿದ್ದ ಲೋಕವಾಗಿತ್ತು. ಅಲ್ಲಿನ ಮಾತುಗಳು ಪಿಸುದನಿಯ ಮಾತುಗಳಾಗಿದ್ದವು. ಅದೆಷ್ಟು ಸಲ ಓದಿದೆನೋ ನೆನಪಿಲ್ಲ. ಪ್ರತಿ ಸಲವೂ ಹೊಸದಾಗಿಯೇ ಓದಿದ ಅನುಭವ. ಯಾವ ಪದವೂ ಸವಕಲಾಗಲಿಲ್ಲ. ಯಾವ ಅನುಭವವೂ ಹಳಸಿತು ಅನಿಸಲಿಲ್ಲ. ಅದರ ಓದು ನನಗಿನ್ನೂ ಪ್ರಿಯವಾಗಿರುವಾಗಲೇ ಅವರ ಕಾದಂಬರಿ 'ನನ್ನಜ್ಜನಿಗೊಂದು ಆನೆಯಿತ್ತು' ಹೊರಬಂದಿತು. ಇದಂತೂ ನನ್ನನ್ನು ತುಂಬಾ ಗಾಢವಾಗಿ ಪ್ರಭಾವಗೊಳಿಸಿತು. ಇವತ್ತಿಗೂ ನಾನು ಓದುತ್ತಲೇ ಇರುವ ಕೆಲವೇ ಕೃತಿಗಳಲ್ಲಿ ಇದೂ ಒಂದು. ಒಂದು ಕತೆಗೆ, ಒಂದು ಕಾದಂಬರಿಗೆ ಒಂದು ಅಪೂರ್ವವಾದ 'ಕಾವ್ಯ ಧ್ವನಿ ಶಕ್ತಿ' ಯಿರಬಲ್ಲದೆಂಬುದನ್ನು ಮೊದಲ ಬಾರಿಗೆ ನಾನು ಈ ಮಹಾ ಲೇಖಕನ ಕೃತಿಗಳಿಂದ ಕಂಡುಕೊಂಡೆ. ಬಷೀರ್ ತಮ್ಮ ಕತೆ, ಕಾದಂಬರಿಗಳ ಮೂಲಕ ಮಲೆಯಾಳ ಸಾಹಿತ್ಯದ ಬಗೆಗೆ ನಮ್ಮಲ್ಲಿ ಗೌರವಭಾವ ಮೂಡುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲ ನನ್ನಂಥವನಿಗೆ ಅಪರಿಚಿತವೆನಿಸಿದ್ದ ಮುಸ್ಲಿಂ ಸಮಾಜವೊಂದರ ಮುಸ್ಲಿಂ ಸಮಾಜದಲ್ಲಿರುವ ಒಳಿತು ಕೆಡಕುಗಳನ್ನು ಧಾರ್ಮಿಕ ವಿಧಿಗಳ ವೈಪರಿತ್ಯಗಳನ್ನು ಸರಳವಾಗಿ, ನವುರಾದ ಹಾಸ್ಯದೊಡನೆ ತೆಗೆದು ತೋರಿದ್ದಾರೆ. ಯಾವುದನ್ನೂ ಮುಚ್ಚಿಡದೆ, ಯಾವ ಬಗೆಯ ಆವೇಶಕ್ಕೂ ಒಳಗಾಗದೆ ಸಮಾಧಾನ ಚಿತ್ತನಾಗಿ ಹೀಗೆ ಬರೆಯಬಲ್ಲ ಲೇಖಕ ಭಾರತದಲ್ಲಿ ಮಾತ್ರ ಅಲ್ಲ ವಿಶ್ವಸಾಹಿತ್ಯದಲ್ಲೆ ತುಂಬಾ ವಿರಳ. ಬಷೀರರ ಒಂದೊಂದು ಕೃತಿಯೂ ಒಂದೊಂದು ಅಪರೂಪದ ಸೃಷ್ಟಿಗಳೇ. ಇಲ್ಲಿನ ಪಾತ್ರಗಳು ನಮ್ಮ ಕಣ್ಣಮುಂದೆ ಬಂದು ಹಾಗೇ ಹೋಗಿಬಿಡುವ ಪಾತ್ರಗಳಲ್ಲ. ನಮ್ಮ ಜೊತೆ ಹೃದಯ ಸಂವಾದಕ್ಕೆ ತೊಡಗುವ ಪಾತ್ರಗಳು. ಇಂಥ ಪಾತ್ರಗಳ ಸೃಷ್ಟಿಕರ್ತ ಬಷೀರರನ್ನು ಕಾಣದೆ, ಕಂಡು ಮಾತಾಡದೆ ಇರುವುದಾದರೂ ಹೇಗೆ?

ಕಡೆಗೊಂದು ದಿನ ಕಲ್ಲಿಕೋಟೆ ಅಂತ ನಮ್ಮ ಕಡೆ ಕರೆಯಲ್ಪಡುವ ಕೋಳಿಕ್ಕೊಡಿಗೆ, ಹಳೆಯ ಮಲಬಾರಿಗೆ ಬಸ್ಸು ಹತ್ತಿದೆ. ಕಾಫಿ ತೋಟಗಳನ್ನು ದಾಟಿ ದಾಟಿ ಪಶ್ಚಿಮ ಘಟ್ಟಗಳನ್ನು ಇಳಿಯುವಾಗ ಆ ರುದ್ರರಮಣೀಯ ನಿಸರ್ಗ ಸೌಂದರ್ಯಕ್ಕೆ ಮೂಕನಾದೆ. ಕಣಿವೆಗಳಲ್ಲಿ ಕೆನೆಗಟ್ಟಿ ನಿಂತ ಬೆಳ್ಳಿಮೋಡಗಳು. ನನ್ನ ಮನಸ್ಸಿನ ಆಳದಲ್ಲೂ ಮಡುಗಟ್ಟಿದ ಬಾಲ್ಯದ ಕನಸುಗಳು. ಘಟ್ಟ ಇಳಿದಿದ್ದೇ ದಾರಿ ಉದ್ದಕೂ ತೆಂಗು, ಅಡಿಕೆ ಮತ್ತು ಬಾಳೆತೋಟಗಳು. ನಡು ನಡುವೆ ಭತ್ತದ ಗದ್ದೆಗಳ ಹಸಿರು ದ್ವೀಪಗಳು. ಯಾವ ಕಡೆ ನೋಡಿದರೂ ನಳನಳಿಸುವ ಹಸಿರು. ಬರೀ ಹಸಿರು. ನೋಡ ನೋಡುತ್ತ ಕಣ್ಣುಗಳೇ ಹಸಿರುಗಟ್ಟಿಬಿಟ್ಟವೇನೋ ಅನಿಸಿತು. ಬಸ್ಸಿನ ಕಿಟಕಿಯಲ್ಲಿ ಮುಖವಿಟ್ಟು ಕೂಡ ನನಗೆ ನನ್ನ ಹಳೆಯ ಕಲ್ಪನೆಗಳು ಒಂದೊಂದೆ ನೆಲಕ್ಕಿಳಿದು ಕಣ್ಣಿಗೆ ತಾಕತೊಡಗಿದವು. ಸ್ವಲ್ಪ ದೂರ ಸಾಗಿದ್ದೆ. ಉರಿವ ಸೂರ್ಯ ಮಂಕಾದಂತೆ, ಅದೆಲ್ಲಿದ್ದವೋ ಕರಿಯ ಮೋಡಗಳು ದಟ್ಟೈಸಿ ಬಂದವು. ಹಗಲೇ ಕತ್ತಲಾದಂತೆ, ಪಟಪಟ ನಾಲ್ಕು ಹನಿ ಸಿಡಿದಿದ್ದೇ ಮತ್ತೆ ಎತ್ತಿ ಬಗ್ಗಿಸಿದಂತೆ ಮಳೆ ಧಾರೆಯಾಗಿ ಅಡ್ಡಗಟ್ಟಿತು. ಬಸ್ಸಿನ ವೇಗ ನಿಧಾನವಾಯಿತು. ಕಂಗೊಳಿಸುತ್ತಿದ್ದ ಹಸಿರುಸಿರಿ ಮಳೆಯಲ್ಲಿ ಮುಳುಗಿಹೋದಂತೆ, ಅಲ್ಲಲ್ಲಿ ಊರು ಸಿಕ್ಕಲ್ಲಿ ಕೊಡೆಗಳ ಮೆರವಣಿಗೆ. ಬಣ್ಣ ಬಣ್ಣದ ಕೊಡೆಗಳ ಕೆಳಗೆ ಹೆಣ್ಣುಗಳೆ ಇರಬೇಕು. ಅವನ್ನು ಕಾಣುವ ತವಕ ನನಗೆ. ಅವೆಲ್ಲ ನನ್ನ ಬಾಲ್ಯದ ಮಾಟಗಾತಿಯರ ಮುಖಗಳೇ ಇರಬೇಕು.

ಬೆಳಿಗ್ಗೆ ನಾನು ಏಳುವ ಮುಂಚೆ ಕೋಳಿಕ್ಕೋಡಿನ ಸೂರ್ಯ ಎದ್ದು ಕೂತಿದ್ದ. ಬಷೀರವರನ್ನು ಕಾಣುವ ಉದ್ವೇಗಕ್ಕೆ ಒಳಗಾದೆ. ಅವರು ಹೇಗಿರಬಹುದು? ಅವರನ್ನು ಏನು ಕೇಳುವುದು? ಏನನ್ನು ಕೇಳಿದರೆ ಅರ್ಥಪೂರ್ಣ? ಯಾವುದು ಸರಿ? ಯಾವುದಲ್ಲ? ಜೋರಾಗಿ ಸುತ್ತುತ್ತಿದ್ದ ಫ್ಯಾನಿನ ಕೆಳಗೆ ಕೂತಿದ್ದರೂ ತಲೆ ಕುದಿಮಡಕೆ ಯಾಗಿತ್ತು. ಟ್ಯಾಕ್ಸಿ ಹಿಡಿದು ವಿಳಾಸ ಹೇಳಿದೆ. ಡ್ರೈವರ್ ನಗುತ್ತಾ ತಲೆಯಾಡಿಸಿದ. ಕೇರಳದ ಯಾವ ಊರಿನಲ್ಲಿ ಹೋಗಿ ಯಾವ ಲೇಖಕನ ವಿಳಾಸ ಕೇಳಿದರೂ ಅದು ಅಕ್ಷರಬಲ್ಲ ಪ್ರತಿಯೊಬ್ಬನಿಗೂ ಗೊತ್ತು. ಅದರಲ್ಲೂ ಬಷೀರ ಅವರ ಹೆಸರು ಮನೆ ಯಾರಿಗೆ ಗೊತ್ತಿಲ್ಲ? ದೊಡ್ಡ ರಸ್ತೆಯಲ್ಲಿಳಿಸಿದ ಚಾಲಕ ಒಂದು ಸಣ್ಣ ಓಣಿಯ ಮೂಲಕ ಹೋಗಲು ಕೈಸನ್ನೆಯ ಮೂಲಕವೇ ಹೇಳಿದ. ಸಣ್ಣ ಓಣಿ ದಾಟಿದೆ. ಬಷೀರ್ ಮನೆ ಸಿಕ್ಕಿತು. ಮಳೆಗೆ ಕಪ್ಪುಕರೆ ಕಟ್ಟಿದ್ದ ಹೆಂಚಿನ ಮನೆ. ಸುತ್ತ ತೆಂಗು, ಅಡಿಕೆ, ಮಾವು, ಬಾಳೆಯ ಜೊತೆಗೆ ಇನ್ನೇನೊ ಮರಗಿಡಗಳಿದ್ದ ಪುಟ್ಟ ತೋಟ.

ಬಾಗಿಲಲ್ಲಿ ನಿಂತಿದ್ದ ನನ್ನನ್ನು ಕಂಡಿದ್ದೆ ವರಾಂಡದಲ್ಲಿದ್ದ ಬಷೀರ್ ಎದ್ದು ಬಂದು ಸ್ವಾಗತಿಸಿದರು. ಮಹಾ ಲೇಖಕನೆಂಬ ಯಾವ ಗತ್ತೂ ಅವರಲ್ಲಿರಲಿಲ್ಲ. ಎಲ್ಲಾ ಮಲೆಯಾಳಿಗಳಂತೆ ಇವರೂ, ಸೊಂಟದಲ್ಲೊಂದು ಪಂಚೆ ಬಿಟ್ಟರೆ ಮೈಮೇಲೆ

ಏನೂ ಇರಲಿಲ್ಲ. ನನ್ನ ಪರಿಚಯ ಹೇಳಿದೆ. ಮುಖದಲ್ಲೊಂದು ತೆಳುಮಂದಹಾಸ ತೇಲಿತು. ಹಳೆಯ ಆರಾಮಕುರ್ಚಿಯಲ್ಲಿ ಕೂತರು. ನಾನೂ ಎದುರಾಗಿ ಕೂತೆ. ನಡುವೆ ಒಂದು ಪುಟಾಣಿ ಸ್ಟೂಲು. ಅದರ ಮೇಲೆ ಒಂದು ಕಟ್ಟು ಬೀಡಿ, ಬೆಂಕಿಪೊಟ್ಟಣ. ಬಳಸಿ ಬಳಸಿ ಸವೆದಂತಿದ್ದ ಕಪ್ಪು ಕಟ್ಟಿನ ಕನ್ನಡಕ ಹಾಗೂ ಕುಡಿದಿಟ್ಟಿದ್ದ ಒಂದು ಟೀ ಲೋಟ. ಯಾವ ಆಡಂಬರವೂ ಇಲ್ಲ. ಎಲ್ಲ ಅವರ ಕೃತಿಗಳಂತೆಯೆ ಸರಳ. ಏನು ಕೇಳುವುದಕ್ಕೂ ತೋಚಲಿಲ್ಲ.

ಬಷೀರ ಗಂಭೀರವಾದ ಕಡಲಿನಂತೆ ಕೂತಿದ್ದರು. ಯಾಕೋ ಮಾತೇ ಬರಲಿಲ್ಲ ಅವರೇ ಮೌನಮುರಿದು ತಮ್ಮ ಹೆಂಡತಿಗೆ ಕೂಗಿ ಏನೋ ಹೇಳಿದರು. ಸ್ವಲ್ಪ ಹೊತ್ತಿನಲ್ಲೆ ತಟ್ಟೆತುಂಬ ಏನೇನೋ ತಿಂಡಿಗಳನ್ನು ಅವರ ಪತ್ನಿ ತಂದಿರಿಸಿದರು. ಅವರ ಪತ್ನಿಯನ್ನು ಪರಿಚಯಿಸಿದಾಗ ನನಗೆ ಆಶ್ಚರ್ಯ. ಅವರ ಪತ್ನಿ ಅವರಿಗಿಂತ ತುಂಬಾ ಚಿಕ್ಕವರು. ನನ್ನ ಆಶ್ಚರ್ಯ ಕುತೂಹಲ ಬಷೀರ್ ಅವರಿಗೆ ಹೇಗೆ ಹೊಳೆಯಿತೊ ಕಾಣೆ? ಅವರೇ ತಾವು ತುಂಬಾ ತಡವಾಗಿ ಮದುವೆಯಾದುದನ್ನು ತಿಳಿಸಿದರು. ಮೊಮ್ಮಕ್ಕಳಂತಿದ್ದ ಇಬ್ಬರು ಮಕ್ಕಳನ್ನು ಕರೆದು ತೋರಿಸಿ ಅವರಿನ್ನೂ ಶಾಲೆಯಲ್ಲಿ ಓದುತ್ತಿದ್ದಾರೆ ಅಂದರು. ಜೊತೆಗೆ ತಟ್ಟೆಯಲ್ಲಿದ್ದುದನ್ನು ತಿನ್ನಲು ಒತ್ತಾಯಿಸಿದರು. ನನಗೋ ಇನ್ನೂ ಮೈಚಳಿ. ತಿನ್ನುವ ಸದ್ದಿನ ಭಯ ಬೇರೆ. ಒಂದು ಚೂರು ಬಾಯಲ್ಲಿಟ್ಟು ಹಾಗೇ ಕೂತೆ. ಕಡೆಗೆ ಬಷೀರ್ ನನ್ನ ಬಗ್ಗೆ, ಕನ್ನಡದ ಬಗ್ಗೆ ವಿಚಾರಿಸಿದರು. ಕೊಂಚ ಸರಾಗವಾಯಿತು. ಒಂದೊಂದೆ ಮಾತನ್ನು ತಡವರಿಸುತ್ತ ಆಡಿದ ನೆನಪು ನನ್ನ ಮಾತಿಗೆ ಪ್ರತಿಯಾಗಿ ಬಷೀರರೂ ತಮ್ಮ ಭೂತಕ್ಕೆ ಮರಳಿ ನೆನಪಿನಾಳದಿಂದ ಒಂದೊಂದೆ ಅನುಭವಗಳನ್ನು ಹೊರತೆಗೆಯತೊಡಗಿದರು.

ಬಾಲ್ಯದಲ್ಲೆ ತಾವು ಮನೆಬಿಟ್ಟಿದ್ದು, ಇಡೀ ಭಾರತವನ್ನು ಬರಿಗಾಲಿನಲ್ಲಿ ಸುತ್ತಿದ್ದು ಗಾಂಧಿಯವರ ಗಾಢಪ್ರಭಾವಕ್ಕೆ ಒಳಗಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದು, ಉಪ್ಪಿನ ಸತ್ಯಾಗ್ರಹ, ಜೈಲುವಾಸ, ಸಮುದ್ರಯಾನ ಹೀಗೆ ತಮ್ಮ ಹೋರಾಟದ ಬದುಕನ್ನು ಬಿಚ್ಚುತ್ತಾ ಹೋದರು. ಬಷೀರರ ಕೃತಿಗಳಲ್ಲಿ ಬರುವ ಪಾತ್ರಗಳ ಬಗ್ಗೆ ಬಷೀರ ಏನೂ ಹೇಳಲಿಲ್ಲ. ಆ ಬಗ್ಗೆ ಕೇಳಿದಾಗ ಮೌನವಾದರು. ಸುಮಾರು ವರ್ಷದ ಹಿಂದೆ ಅವರು ಹೇಳಿದ ಮಾತುಗಳಿನ್ನೂ ನನ್ನ ನೆನಪಿನಲ್ಲಿ ಕೊರೆದಿಟ್ಟಂತಿವೆ. ಬಷೀರ ಹೇಳಿದರು: "ನನ್ನ ತಾಯಿ ಭಾಷೆ ಮಲಯಾಳಂ, ನನ್ನ ಧರ್ಮ ಇಸ್ಲಾಂ. ಉರ್ದು ಮುಸ್ಲಿಂರ ಭಾಷೆ ಅನ್ನುವುದು ಮೂರ್ಖ ಕಲ್ಪನೆ." ಹಾಗೆಯೇ ಧರ್ಮದ ಬಗೆಗಿನ ಅವರ ವಿಚಾರಗಳೂ ಅರ್ಥಗರ್ಭಿತವಾಗಿದ್ದವು. 'ಮಾನವ ಪ್ರೇಮ'ಕ್ಕಿಂತ ಮಿಗಿಲಾದ ಧರ್ಮ ಯಾವುದಿದೆ ಅಂದರು. ಅದೇ ಅವರ ಎಲ್ಲಾ ಕೃತಿಗಳ ಅತಃಸತ್ವ ಕೂಡ. ತಾವು "ನನ್ನಜ್ಜನಿಗೊಂದಾನೆಯಿತ್ತು" ಕೃತಿ ಪ್ರಕಟಿಸಿದಾಗ ಕೇರಳದ ತಮ್ಮ ಕುಲಬಾಂಧವರೇ

ಹೇಗೆ ರೋಷತಪ್ತರಾದರೆಂಬುದನ್ನು ಹೇಳಿದರು. ಅಸಾಧಾರಣ ಕಾವ್ಯದಂತಿರುವ ಈ ಕೃತಿಯಲ್ಲಿ ಬಷೀರರು ತಾವು ತುಂಬಾ ಗೌರವಿಸುವ ಕುರಾನಿನ ಅನೇಕಾನೇಕ ಪ್ರತಿಮೆಗಳನ್ನು ಉಲ್ಲೇಖಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಹಾಗೇ ಮುಸಲ್ಮಾನ ಸಮಾಜದ ಅರ್ಥಹೀನ ಆಚಾರವನ್ನು, ಘೋರಸತ್ಯಗಳನ್ನು ಬಷೀರ ಯಾವ ಉದ್ವೇಗ ಇಲ್ಲವೆ ಪೂರ್ವಗ್ರಹಕ್ಕೂ ಒಳಗಾಗದೆ ಒಬ್ಬ ಸ್ಥಿತಪ್ರಜ್ಞನಂತೆ ಕಂಡಿದ್ದಾರೆ; ಕಾಣಿಸಿದ್ದಾರೆ. ಈ ಕಾಣ್ಕೆ ಸಾಮಾನ್ಯ ಸಾಧಕನಿಗೆ ದಕ್ಕುವಂತದ್ದಲ್ಲ. ಈ ಕೃತಿಯಲ್ಲಿ ಬರುವ ಮುಗ್ಧ ಹೆಣ್ಣು ಮಗಳು ಕುಞಪಾತುಮ್ಮಳೇ ಕೃತಿಯ ಕೇಂದ್ರ ಪ್ರಜ್ಞೆ. ಅವರ ಸ್ಮೃತಿಗಳ ಮೂಲಕವೇ ಆ ಕುಟುಂಬ ಹೇಗೆ ಸಿರಿವಂತಿಕೆಯಿಂದ ಕಡುಬಡತನಕ್ಕೆ ಇಳಿಯುತ್ತದೆಂಬುದನ್ನು ಲೇಖಕ ಮನಮುಟ್ಟುವ ಹಾಗೆ ನಿರೂಪಿಸಿದ್ದಾರೆ. ಸಿರಿವಂತ ಕುಟುಂಬದ ಮಗಳು ಕುಞಪಾತಮ್ಮ ಎಲ್ಲವನ್ನೂ ಕಳೆದುಕೊಂಡಿರುತ್ತಾಳೆ. ಆದರೆ ತನ್ನ ಹುಟ್ಟಿನೊಂದಿಗೇ ಕಟ್ಟಿಕೊಂಡಿದ್ದ ಅಂಧ ಶ್ರದ್ಧೆಗಳ ಮೌಢ್ಯಗಳ ಹೊರೆಯನ್ನು ಮಾತ್ರ ಇಳುಕಲಾರಳು. ಅವಳ ಪಾಲಿಗೆ ಸೃಷ್ಟಿಯಲ್ಲಿ ಇದ್ದುದು ಎರಡೇ ವರ್ಗ, ಒಂದು ಇಸ್ಲಾಮಿ, ಇನ್ನೊಂದು ಕಾಫರ್. ಕಾಫರರು ಸತ್ತರೆ ಅವರಿಗೆ ನರಕವೇ ಗತಿ. ಎಲ್ಲಾ ಕೆಟ್ಟಿದ್ದರ ಮೊತ್ತ ಕಾಫರ್. ಇಂಥ ನಂಬಿಕೆ ಕುಞಪಾತುಮ್ಮಳದು. ಅವಳು ತನ್ನೆಲ್ಲ ಒಡವೆವಸ್ತುಗಳನ್ನೂ ಕಳೆದುಕೊಂಡುಬಿಡುತ್ತಾಳೆ. ಅವಳ ಸಂಪತ್ತನೆಲ್ಲ ದೋಚಿಕೊಂಡ ಶಕ್ತಿ ಅವಳ ಅಂಧ ಶ್ರದ್ಧೆಗಳನ್ನು ಮುಟ್ಟುವುದಿಲ್ಲ. ಅವಳು ಸದಾ ಮೌಢ್ಯಗಳ ತಿರುಗಣಿಮಡುವಿಗೆ ಸಿಕ್ಕಿ ಸುತ್ತುತ್ತಾಳೆ. ಅಂತ ಸ್ಥಿತಿಯಲ್ಲಿ ಅವಳನ್ನಿಟ್ಟಿರುವ ಸಮಾಜದ ಬಗೆಗೆ ರೋಷವುಂಟಾಗುತ್ತದೆ. ಆದರೆ ಲೇಖಕ ಬಷೀರ ರೋಷಗೊಳ್ಳುವುದಿಲ್ಲ. ನಗುನಗುತ್ತಲೇ ಆ ಸಮಾಜದ ವಿಕೃತಿಗಳಿಗೆ ಕನ್ನಡಿ ಹಿಡಿಯುತ್ತಾರೆ. ತಾವೇನು ಮಾಡುತ್ತೇವೆ ಅನ್ನುವುದೆ ಅರಿವಿರದ ಮುಗ್ಧರ ಅಂತಃಕರಣವನ್ನು ತೆರೆದುತೋರಿ ಅವರ ಬಗೆಗೆ ನಮ್ಮಲ್ಲಿ ಅನುಕಂಪವುಂಟಾಗುವಂತೆ ಮಾಡುತ್ತಾರೆ. ಇದು ಅಂತರ್ಮುಖಿಯಾದ ಲೇಖಕನಿಂದ ಮಾತ್ರ ಸಾಧ್ಯ. ಬೋಳು ತಲೆಯ ಮೇಲೆ ಕೈಯಿಟ್ಟುಕೊಂಡು ಸೃಷ್ಟಿರಹಸ್ಯಗಳನ್ನೆಲ್ಲಾ ತನ್ನೊಳಗೇ ಬಿಡಿಸಿಕೊಳ್ಳುತ್ತಾ ತನಗೆ ತಾನೇ ನಗುತ್ತ, ಗಂಭಿರವಾಗುತ್ತ, ಆಗೀಗ ಉನ್ಮಾದರೋಗಕ್ಕೂ ಒಳಗಾಗುತ್ತ ಪೂರ್ಣವಾದ ಬಾಳನ್ನು ಬಾಳುತ್ತಿರುವ ಬಷೀರ ನಿಜವಾದ ಅರ್ಥದಲ್ಲಿ ಒಬ್ಬ ಅನುಭಾವಿ.

ಸುಮಾರು ನಾಲ್ಕುಗಂಟೆಗಳಾಗಿದ್ದವು ನಾನು ಬಷೀರರ ಮುಂದೆ ಕಿವಿ ತೆರೆದು ಕೂತು. ಇಷ್ಟು ತನ್ಮಯನಾಗಿ ನಾನೆಂದೂ ಯಾರ ಮುಂದೆಯೂ ಹೀಗೆ ಕೂತವನೇ ಅಲ್ಲ. ಈ ವಯೋವೃದ್ಧ ಹಾಗೂ ಜ್ಞಾನವೃದ್ಧ ವ್ಯಕ್ತಿ ನನಗೊಂದು 'ಮಲೆಯಾಳ ಮೋಡಿ' ಹಾಕಿಬಿಟ್ಟಂತೆ ನೋಡ ನೋಡುತ್ತ ಈ ಬಷೀರ ತಾನು ಹೊದ್ದುಕೊಂಡಿದ್ದ ಇಸ್ಲಾಂ ಚಾದರವನ್ನೂ ಕಳಚಿಟ್ಟಂತೆ, ಯಾವ ಧರ್ಮದ

ಚಾದರದಲ್ಲೂ ಮಲಿನತೆ ಇಲ್ಲದೆ ಇಲ್ಲ ಎಂದು ತೋರಿಸುತ್ತಿರುವಂತೆ. ಕಡೆಗೆ 'ಮಾನವ ಪ್ರೇಮ' ಒಂದೇ ನಿಜವಾದ ಧರ್ಮ ನೋಡಿ ಎಂದು ಹೇಳುತ್ತಾ ನಮ್ಮ ಪ್ರಾಚೀನ ಋಷಿಯೇ ಆಗಿಬಿಟ್ಟಂತೆ. ಬಷೀರರ ಜ್ಞಾನ ಮತ್ತು ಅನುಭವಗಳು ಅವರ ಮನೆಯಿಂದ ಕೂಗಳತೆ ದೂರದಲ್ಲಿರುವ ಅರಬ್ಬೀಸಮುದ್ರವಾಗಿದ್ದವು. ನನ್ನ ಸಣ್ಣ ಪಾತ್ರೆಯಲ್ಲಿ ನಾನು ಇನ್ನೆಷ್ಟನ್ನು ತಾನೇ ತುಂಬಿಕೊಳ್ಳಲಿ?

ನನ್ನ ಕೇರಳದ ಮೊದಲ ಪ್ರವಾಸವು ಸಾಹಿತ್ಯ ಪ್ರವಾಸವಾಗಿತ್ತು. ನನ್ನ ಬಹುದಿನದ ಬಯಕೆ ಈಡೇರಿದ ತೃಪ್ತಿಯಿಂದ ಉಲ್ಲಸಿತನಾದೆ. ನಂತರ ಕೇರಳದ ಉದ್ದಗಲಕ್ಕೂ ಮೂರು ನಾಕು ಸಲ ಸುತ್ತಿ ಬಂದೆ. ಆದರೆ ಯಾವುದೂ ನನ್ನ ಪ್ರಥಮ ಪ್ರವಾಸದಷ್ಟು ಅದ್ಭುತ ಅಂತ ಅನ್ನಿಸಲೇ ಇಲ್ಲ. ಈಗ ನನಗೆ ಮಲಯಾಳಂ ಸಾಹಿತ್ಯದ ಪರಿಚಯ ಸಾಕಷ್ಟಿದೆ. ಆ ಭಾಷೆಯ ಆಧುನಿಕ ಬರಹಗಾರರ ಮಹತ್ವದ ಕೃತಿಗಳನ್ನು ಕನ್ನಡ ಇಲ್ಲವೇ ಇಂಗ್ಲಿಷಿನಲ್ಲಿ ಓದಿಕೊಂಡಿದ್ದೇನೆ. ತಕಳಿ, ಕೇಶವದೇವ್, ಉರುಬ್, ಪೊಟ್ಟೆಕ್ಕಾಟ್, ಎಂ.ಟಿ.ವಿ. ಅವರ ಮುಖ್ಯ ಕೃತಿಗಳು ಕನ್ನಡಕ್ಕೆ ಬಂದಿವೆ. ವಳ್ಳತ್ತೋಳ್ ಆಸಾನ್, ಕುರುಪ್ ಹಾಗೂ ಅಯ್ಯಪ್ಪಪಣಿಕ್ಕರ, ಕಡಮನಟ್ಟ ರಾಮಕೃಷ್ಣ ಮುಂತಾದ ಕವಿಗಳ ಕವಿತೆಗಳೂ ಕನ್ನಡದಲ್ಲಿವೆ. ಇವನ್ನೆಲ್ಲಾ ತುಂಬಾ ಗಂಭೀರವಾಗಿ ಅಭ್ಯಾಸ ಮಾಡಿದ್ದೇನೆ. ಆದರೆ ಯಾರೂ ಬಷೀರ ನನ್ನೊಳಗೆ ಇಳಿದಂತೆ ಇಳಿಯಲಿಲ್ಲ.

ಕಳೆದ ಓಣಂ ಹಬ್ಬಕ್ಕೆ ಸರಿಯಾಗಿ ನಾನು ನನ್ನ ಲೇಖಕ ಮಿತ್ರರೊಡನೆ ಇನ್ನೊಮ್ಮೆ ಕೇರಳ ಪ್ರವಾಸಕ್ಕೆ ಹೊರಟೆ. ಜೊತೆಗೆ ದೇವನೂರು ಮಹಾದೇವನೂ ಇದ್ದ. ಕೇರಳದೊಳಕ್ಕೆ ಕಾಲಿಡುತ್ತಿದ್ದಂತೆ ಹಬ್ಬದ ಸಂಭ್ರಮ. ಇಡೀ ಕೇರಳ ಮದುಮಗಳಂತೆ ಸಿಂಗರಿಸಿಕೊಂಡು ಬೀಗುತ್ತಿತ್ತು. ಮಲೆಯಾಳಿಗಳಿಗೆ ಓಣಂ ದೊಡ್ಡ ಹಬ್ಬ. ಅವರ ಸಡಗರವನ್ನು ಹೇಳತೀರದು. ಗೆಳೆಯ ಸುಂದರೇಶನ ಹಳೆಯ ವಿದೇಶಿಕಾರು ಗಂಟೆಗೆ ಮುವತ್ತು ಕಿಲೋಮಿಟರ್ ವೇಗದಲ್ಲಿ ಸಾಗತೊಡಗಿತ್ತು. ಯಾಕೊ ಕೊಂಚ ವೇಗಗೊಳಿಸಿದರೆ ಸಾಕು ಕಾರಿನ ಇಂಜನ್ನಿಗೆ ಇಲ್ಲವೆ ಚಾಲಕನಿಗೆ ಏನಾದರೂ ತೊಂದರೆ. ಪ್ರವಾಸದುದ್ದಕ್ಕೂ ಹಗಲೆಲ್ಲಾ ಕಾರಿನ ಇಂಜನ್ನಿಗೆ ರಾತ್ರಿಯಾದರೆ ಚಾಲಕನಾದ ಸುಂದರೇಶನಿಗೆ ಎಣ್ಣೆಹಾಕಿಸಿ ಹಾಕಿಸಿ ಸಾಕಾಯಿತು. ಅದರ ನಿಧಾನ ಒಂದು ರೀತಿ ಒಳ್ಳೆಯದಾಯಿತು. ಕೇರಳದ ಇಂಚು ಇಂಚನ್ನೂ ಕಣ್ಣಿಗೆ ತುಂಬಿಕೊಳ್ಳಲು ಸಾಧ್ಯವಾಯಿತು. ಪ್ರತಿ ಊರೆಲ್ಲೂ ನಿಂತು ಬಾರದ ಮಲೆಯಾಳವನ್ನೇ ಬಳಸಿ, ನಗಿಸಿ, ನಾವು ನಕ್ಕು ಸಾಗಿದೆವು. ಒಂದು ದಿನದಲ್ಲಿ ಹೋಗಿ ಬಂದು ಬಿಡಬಹುದಾಗಿದ್ದ ದೂರವನ್ನು ಒಂದು ವಾರ ಇಡಿಯಾಗಿ ಸವೆಸಿದೆವು. ಈ ಸಲದ ಪ್ರವಾಸದಲ್ಲಿ ನನ್ನ ಹೆಸರು ಕೇರಳದಲ್ಲಿ ಸಾಕಷ್ಟು ಜನಪ್ರಿಯವಾಗಿ ಬಿಟ್ಟಿರುವುದನ್ನು ಕಂಡೆ.

ನನ್ನ 'ಕಾಡಿ'ಗಿಂತ ಗೆಂಡೆತಿಮ್ಮ ಇಲ್ಲಿ 'ಪಾವತ್ತಾನ್' ಹೆಸರಿನಲ್ಲಿ ಮಲೆಯಾಳಿಗಳಿಗೆ ತುಂಬಾ ಪ್ರಿಯವಾಗಿತ್ತು. 'ಗೆಂಡೆತಿಮ್ಮ' 'ಮರಂಕಿ'ಯರು

ಅಲ್ಲಿಯವರಿಗೆ ಚಿರಪರಿಚಿತರಾಗಿ ಬಿಟ್ಟಿದ್ದರು.

ಈ ಸಲವೂ ನಮಗೆ ಬಷೀರರ ದರ್ಶನವೇ ಮಹತ್ವದ್ದಾಗಿತ್ತು. ಬಷೀರರನ್ನು ಕಾಣಲು ಎಲ್ಲರೂ ಅವರ ಮನೆ ಮುಟ್ಟಿದೆವು. ಪಕ್ಕೆ ಹಿಡಿದು ಕೆಮ್ಮುತ್ತಲೇ ಹೊರಗೆ ಬಂದರು. ತುಂಬಾ ಹಣ್ಣಾಗಿ ಬಿಟ್ಟಿದ್ದರು. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ನಮ್ಮ ಜೊತೆ ಕೂತರು. ಅವರನ್ನು ಕಂಡಿದ್ದೆ ಮಹಾದೇವ ಅವಕ್ಕಾದ. ಅವನಿಗೂ ನಾನು ಮೊದಲ ಸಲ ಅವರನ್ನು ಕಂಡಾಗ ಆಗಿದ್ದ ಅನುಭವವಾಗಿರಬೇಕು. ಅವರನ್ನೇ ನೋಡುತ್ತಾ ಮಾತನಾಡದೆ ಕೂತ. ನಾನು ಆ ಮನೆಯಲ್ಲಿ ಒಂದು ಬದಲಾವಣೆ ಮಾತ್ರ ಗಮನಿಸಿದೆ. ಕಳೆದ ಬಾರಿ ಬಂದಿದ್ದಾಗ ಕಂಡಿದ್ದ ಶಾಲೆ ಕಲಿಯುತ್ತಿದ್ದ ಮಗಳು ಮದುವೆಯಾಗಿ ಅವಳಿಗೊಂದು ಗಂಡು ಮಗುವಾಗಿತ್ತು. ಮೊಮ್ಮಗನನ್ನು ಅಪ್ಪಿಕೊಂಡಿದ್ದ ಬಷೀರರ ಪಕ್ಕದಲ್ಲಿ ಬೆಳೆದು ದೊಡ್ಡವನಾಗಿದ್ದ ಮಗ ನಿಂತಿದ್ದ.

ಕೆಮ್ಮುತ್ತಲೇ ಇದ್ದ ಬಷೀರರ ಜೊತೆ ಮಾತನಾಡುವುದು ಕಷ್ಟವಾಗಿತ್ತು. ಆದರೂ ನಮ್ಮ ತವಕ ತಾಳಿ ಕೊಳ್ಳಬೇಕಲ್ಲ. ಕೇಳಿಯೇ ಕೇಳಿದವು. ನಮ್ಮ ಅಸಂಬದ್ಧ ಕೇಳಿಕೆಗೂ ಬಷೀರ ಸಾವಧಾನದಿಂದಲೇ ಉತ್ತರಿಸಿದರು. ಇತ್ತೀಚೆಗೆ ಕೇರಳಕ್ಕೆ ಕೊಲ್ಲಿ ದೇಶಗಳಿಂದ ಬರುವ ಹಣ, ನಾವು ಕೇರಳದ ದಾರಿ ಉದ್ದಕ್ಕೂ ಕಂಡ ಆಧುನಿಕ ಸೌಧಗಳು, ಇಲ್ಲಿನ ಜನರ ಬದುಕಿನಲ್ಲಿ ಇದರಿಂದಾದ ಪರಿಣಾಮಗಳು, ಹಿಂದೂ ಮುಸ್ಲಿಂ ಘರ್ಷಣೆಗಳು. ಬಷೀರ ಹೇಳಿದರು: ಭಾರತದಿಂದ ಕೊಲ್ಲಿಗೆ ಹೋದ ಬಹಳಷ್ಟು ಮುಸ್ಲಿಂ ಜನ ಬರೀ ಕೂಲಿಕಾರರು. ಸ್ವಲ್ಪ ತಂದದ್ದನ್ನೇ ತುಂಬಾ ಅನ್ನುವಂತೆ ತೋರಿಸಿಕೊಳ್ಳುತ್ತಾರೆ. ಆದರೆ ನಿಜವಾಗಿಯೂ ಕೊಲ್ಲಿಯಿಂದ ತುಂಬಾ ತರುತ್ತಿರುವ ಹಿಂದೂ ಡಾಕ್ಟರು, ಇಂಜಿನಿಯರು ಎಲ್ಲಿ ತೋರಿಸಿಕೊಳ್ಳುತ್ತಿದ್ದಾರೆ?

ಹಿಂದೂಸ್ಥಾನದ ಮುಸ್ಲಿಂರು ಒಳಗಾಗಿರುವ ಆತಂಕ ಅನುಮಾನಗಳಿಗೆ ಈ ದಾರ್ಶನಿಕ 'ಬಷೀರ' ನಿಟ್ಟುಸಿರಾಗಿದ್ದರು. ಅವರು ಅಂದರು: "ಎಲ್ಲಿಯ ತನಕ ಹಿಂದೂಸ್ಥಾನ ಮತ್ತು ಪಾಕಿಸ್ಥಾನ ಒಂದಾಗುವುದಿಲ್ಲವೊ ಅಲ್ಲಿಯತನಕ ಮುಸ್ಲಿಂರ ತಲೆ ಮೇಲೆ ಆತಂಕದ ಕತ್ತಿ ತೂಗುತ್ತಲೇ ಇರುತ್ತದೆ". ಮುಂದೆ ನಮಗೆ ಬೇರೆ ಯಾವ ಮಾತೂ ಬರಲಿಲ್ಲ. ನಮಗೆ ಮುಂದೆ ಉಳಿದಿದ್ದ ಕ್ರಿಯೆ ಒಂದೇ ಆಗಿತ್ತು. ಅದು ಅವರ ಕಾಲು ಮುಟ್ಟಿ ನಮಸ್ಕರಿಸಿ ಬಂದು ಬಿಡುವುದು.

(ಸಾಭಾರ– ಪುಸ್ತಕ ಪ್ರಪಂಚ)

# ಜನಪದ ನಿಲಯದ ಅಂತರಂಗದಲ್ಲಿ......೨೧

*-ಸುರೇಂದ್ರ ಕೌಲಗಿ*



ಮೇಲುಕೋಟೆಯಲ್ಲಿ ಸಾರ್ವಜನಿಕ ಜೀವನದ ಪ್ರಾರಂಭವನ್ನು ಶಿಶುವಿಹಾರದ ಸ್ಥಾಪನೆಯೊಂದಿಗೆ ಮಾಡಬೇಕೆನ್ನುವ ಸಮಯದಲ್ಲಿಯೆ ಶ್ರೀಮತಿ ನಾಗಮ್ಮನವರ ಮೂಲಕ ಗಿರಿಜಾಳ ಪರಿಚಯವಾದದ್ದು ಕಾಕತಾಳೀಯವೆಂದೇ ಹೇಳಬೇಕು. ಶಿಶುವಿಹಾರವನ್ನು ನನ್ನ ಮೊದಲ ಸಾರ್ವಜನಿಕ ಕಾರ್ಯಕ್ರಮವನ್ನಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಇದ್ದ ಪ್ರಮುಖ ಕಾರಣವೆನೆಂದರೆ ಶಿಶುವಿಹಾರವನ್ನು ಪ್ರಾರಂಭಿಸಲು ಬೇರೆ ಯಾವುದೇ ಪ್ರಕಾರದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ಅಗತ್ಯವಿರುವ ಹಣದ ಬಲವಾಗಲಿ ಮತ್ತು ಇತರ ಅಗತ್ಯಸಂಪನ್ಮೂಲಗಳ ವ್ಯವಸ್ಥೆಬೇಕಿಲ್ಲವೆಂಬ ಅನಿಸಿಕೆ. ಅಲ್ಲದೆ ಶಿಶುವಿಹಾರಕ್ಕಿಂತಲೂ ದೊಡ್ಡದಾದ ಕೆಲಸ ಪ್ರಾರಂಭಿಸಲು ಬೇಕಾದ ಜನಬಲ, ಧನಬಲ ಇತ್ಯಾದಿ ನನ್ನಲ್ಲಿ ಇರಲಿಲ್ಲವಾದ್ದರಿಂದ ಶಿಶುವಿಹಾರವನ್ನು ಪ್ರಾರಂಭಿಸುವುದೇ ಉಚಿತವೆಂದೆನಿಸಲು ಸಹ ಕಾರಣವಾಯಿತು. ಆದರೆ ನನಗೆ ಸಾರ್ವಜನಿಕ ಜೀವನದ ಅನುಭವವಾಗುತ್ತಾಹೋದಂತೆ ಶಿಶುವಿಹಾರದ ಬಗ್ಗೆ ಇದ್ದ ನನ್ನ ಈ ಅನಿಸಿಕೆ ತಪ್ಪೆಂದು ಗೋಚರಿಸಲಾರಂಭಿಸಿತು. ಶಿಶುಶಿಕ್ಷಣ ಬಹು ಕಷ್ಟಕರವಾದುದು ಮತ್ತು ಬಹಳಷ್ಟು ಸಂಪನ್ಮೂಲವನ್ನು ಕೇಳುವಂತದೂ ಎಂದು ನನಗೆ ಗೊತ್ತಾಯಿತು. ಈಗಲೂ ಸಹ ನಿಜವಾದ ಅರ್ಥದ ಶಿಶುವಿಹಾರವು ಯಾವುದೇ ಒಂದು ಮಹಾವಿದ್ಯಾಲಯಕ್ಕಿಂತ ಕಡಿಮೆಯೇನಲ್ಲ ಎಂಬುದು ನಿಜ ಸಂಗತಿ. ಅದೇನೆ ಇರಲಿ ಶಿಶುವಿಹಾರವನ್ನು ಪ್ರಾರಂಭಿಸಲು ಆಲೋಚಿಸಿದಾಗ ನನ್ನ ಬಳಿ ಯಾವ ಹಣವೂ ಇರಲಿಲ್ಲ. ಆದರೆ ಶಿಶುವಿಹಾರವನ್ನು ನಡೆಸಲು ಓರ್ವ ಅಧ್ಯಾಪಕಿ, ಓರ್ವ ಸಹಾಯಕಿ ಮತ್ತು ಒಂದು ಕಟ್ಟಡ, ಇಷ್ಟಾದರೂ ಅಗತ್ಯವಾಗಿ ಬೇಕಾಗಿತ್ತು. ಕಟ್ಟಡದ ಸಮಸ್ಯೆಯನ್ನೇನೊ ಸುಲಭವಾಗಿ ಪರಿಹರಿಸಿಕೊಂಡೆ ನಾನು ವಾಸವಾಗಿದ್ದ ಭಕ್ತಮಂಡಳಿಯ ಕಟ್ಟಡದ ಎದುರಿನಲ್ಲಿಯೆ ಶ್ರೀಕೃಷ್ಣ ದೇವಸ್ಥಾನವೊಂದಿತ್ತು ಅದು ಈಗಲೂ ಇದೆ. ಆದರೆ

ಆಗ ಆ ದೇವಸ್ಥಾನದಲ್ಲಿ ಹೆಚ್ಚಿನ ಪೂಜೆ, ಪುನಸ್ಕಾರಗಳು ನಡೆಯುತ್ತಿರಲಿಲ್ಲ. ಒಂದು ರೀತಿಯಲ್ಲಿ ಆ ದೇವಸ್ಥಾನದ ಕಟ್ಟಡ ನಿರ್ಲಕ್ಷಿತವಾಗಿತ್ತು. ದೇವಸ್ಥಾನದ ಮುಂಭಾಗ ಸುಮಾರು ೧೨ ಅಡಿ ಅಗಲ ೩೦ ಅಡಿ ಉದ್ದದ ಖಾಲಿ ಸ್ಥಳವಿತ್ತು. ಈ ಕಟ್ಟಡದಲ್ಲಿಯೆ ಶಿಶುವಿಹಾರವನ್ನು ಪ್ರಾರಂಭಿಸಲು ಆಲೋಚಿಸಿದೆ. ಕಟ್ಟಡಕ್ಕೆ ಬಾಡಿಗೆ ಕೊಡಬೇಕಾದ ಅಗತ್ಯವೇನಿರಲಿಲ್ಲ ಆದ್ದರಿಂದ ಮನೆ ಬಾಡಿಗೆಯ ಚಿಂತೆ ತಪ್ಪಿತು. ಶ್ರೀಕೃಷ್ಣ ದೇವಸ್ಥಾನದ ಆವರಣದಲ್ಲಿ ಶಿಶುವಿಹಾರವನ್ನು ಪ್ರಾರಂಭಿಸಲು ಯೋಚಿಸಿದ್ದರಿಂದ ಶಿಶುವಿಹಾರಕ್ಕೆ ಶ್ರೀಕೃಷ್ಣ ಶಿಶುವಿಹಾರವೆಂದು ನಾಮಕರಣ ಮಾಡಿದೆ. ದೇವಸ್ಥಾನದ ಒಳಗೆ ಮತ್ತು ಹೊರಗೆ ಸ್ವಚ್ಛತೆಯನ್ನು ಮಾಡಿದೆ. ಗರ್ಭಗುಡಿಯಲ್ಲಿ ಮಕ್ಕಳನ್ನು ಬಿಡಬಾರದೆಂಬ ಕಾರಣಕ್ಕಾಗಿ ಗರ್ಭಗುಡಿಯ ಮುಂದೆ ಸದಾ ತೆರೆಯನ್ನು ಹಾಕಿರಬೇಕೆಂಬ ನಿಯಮವನ್ನು ನಾನು ಒಪ್ಪಿಕೊಂಡೆ. ಆನಂತರ ಮೇಲುಕೋಟೆಯಲ್ಲಿಯೆ ಎಸ್.ಎಸ್.ಎಲ್.ಸಿ ಯವರೆಗೆ ಓದಿದ್ದ ಯಗ್ಗಮ್ಮ ಎಂಬ ಗೃಹಿಣಿಯನ್ನು ಭೇಟಿ ಮಾಡಿ ಶಿಶುವಿಹಾರದ ಅಧ್ಯಾಪಕಿಯಾಗಿ ಕೆಲಸ ಮಾಡಲು ವಿನಂತಿಸಿಕೊಂಡೆ. ಅವರು ಈ ಕೆಲಸವನ್ನು ಸಂತೋಷವಾಗಿ ಒಪ್ಪಿಕೊಂಡರು. ಎಷ್ಟು ಸಂಬಳ ಕೊಡುವಿರೆಂದು ನನ್ನನ್ನು ಕೇಳಿದಾಗ ನಾನು ಹಿಂದು-ಮುಂದು ನೋಡುತ್ತಾ ಬಹು ಸಂಕೋಚದಿಂದ ೫೦ ರೂ ಕೊಡಬಹುದೆಂದು ಹೇಳಿದೆ. ಅವರು ಅಷ್ಟು ಕಡಿಮೆ ಸಂಬಳಕ್ಕೆ ಒಪ್ಪಿಕೊಂಡರು. ನಂತರ ಓರ್ವ ಸಹಾಯಕಿಗಾಗಿ ಹುಡುಕಾಟ ಮಾಡಿದೆ. ಆಗ ನನ್ನೊಂದಿಗೆ ಭಕ್ತಮಂಡಳಿಯಲ್ಲಿ ವಾಸವಾಗಿದ್ದ ಬಿ.ವಿ.ಸಂಪತ್ಕುಮಾರಾಚಾರ್ಯರು ತಮಗೆ ಪರಿಚಯವಿದ್ದ ಲಕ್ಷ್ಮಮ್ಮ ಎಂಬುವವರ ಹೆಸರನ್ನು ಸೂಚಿಸಿದರು. ಅವರು ಸಹ ತಿಂಗಳೊಂದಕ್ಕೆ ೩೦ ರೂಪಾಯಿಗಳ ಸಂಬಳಕ್ಕೆ ಸಹಾಯಕಿಯಾಗಿ ಕೆಲಸ ಮಾಡಲು ಒಪ್ಪಿದರು. ಅಲ್ಲಿಗೆ ತಿಂಗಳೊಂದಕ್ಕೆ ೮೦ರೂಪಾಯಿಗಳ ಅಗತ್ಯವಿದೆಯೆಂದು ಲೆಕ್ಕಹಾಕಿ ಒಂದು ಮಗುವಿಗೆ ಮಾಹೆಯಾನ ೧೦ರೂಪಾಯಿ ಶುಲ್ಕದಂತೆ ೩೦ ಮಕ್ಕಳನ್ನು ಸೇರಿಸಿಕೊಳ್ಳಬಹುದೆಂದು ಆಲೋಚಿಸಿದೆ. ಆನಂತರ ಗ್ರಾಮದಲ್ಲಿಯ ಕೆಲವರ ಮನೆಗೆ ಹೋಗಿ ಶಿಶುವಿಹಾರವನ್ನು ಪ್ರಾರಂಭಿಸಲಾಗುತ್ತಿರುವ ವಿಚಾರವನ್ನು ತಿಳಿಸಿ ತಮ್ಮ ಮಕ್ಕಳನ್ನು ಶಿಶುವಿಹಾರಕ್ಕೆ ಕಳುಹಿಸಬೇಕೆಂದು ಪ್ರಚಾರ ಮಾಡಿದೆ. ಕೆಲವು ತಂದೆ-ತಾಯಿಗಳು ಸಮ್ಮತಿಸಿದರು. ಇಷ್ಟೆಲ್ಲಾ ಏರ್ಪಾಡಾದ ನಂತರ ಭಕ್ತಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಬಿ.ವಿ.ರಾಘವಾಚಾರ್ಯರನ್ನು ಭೇಟಿ

ಮಾಡಿ ಎಲ್ಲ ವಿಷಯವನ್ನು ತಿಳಿಸಿದೆ. ಶ್ರೀರಾಘವಾಚಾರ್ಯರು ನನ್ನ ಬಗ್ಗೆ ಪ್ರೀತಿ ಇಟ್ಟಂಥ ಹಿರಿಯರಾಗಿದ್ದರು.ರಾಘವಾಚಾರ್ಯರು ಭಕ್ತ ಮಂಡಳಿಯ ಮೂಲಕ ಮೇಲುಕೋಟೆಯು ಅಭಿವೃದ್ಧಿಗಾಗಿ ಪರಿಶ್ರಮಿಸುವಂಥ ಪ್ರಮುಖರಾಗಿದ್ದರು. ಭಕ್ತ ಮಂಡಳಿಯ ಮೂಲಕ ಶ್ರೀ ಯದುಶೈಲ ಪ್ರೌಢಶಾಲೆ ಎಂಬುದನ್ನು ಪ್ರಾರಂಭಿಸಿದ್ದರು, ಪಶುವೈದ್ಯ ಶಾಲೆಯು ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದರು, ದೇವಸ್ಥಾನದಲ್ಲಿಯ ಅರ್ಚಕರಿಗೆ ಧನಸಹಾಯವನ್ನು ಮಾಡುತ್ತಿದ್ದರು, ಮೇಲುಕೋಟೆಗೆ ಬರುವ ಭಕ್ತಾದಿಗಳಿಗೆ ಅನ್ನದಾನ ಮಾಡುತ್ತಿದ್ದರು. ಶಿಶುವಿಹಾರದ ಪ್ರಾರಂಭೋತ್ಸವಕ್ಕೆ ಒಂದು ದಿನವನ್ನು ಗೊತ್ತು ಮಾಡಿಕೊಡಬೇಕೆಂದು ಹಾಗೂ ಆ ದಿನ ತಾವೆ ಬಂದು ಶಿಶುವಿಹಾರವನ್ನು ಉದ್ಘಾಟಿಸಬೇಕೆಂದು ಪ್ರಾರ್ಥಿಸಿದೆ. ಅದಕ್ಕೆ ಅವರು ಬಹಳ ಸಂತೋಷದಿಂದ ಒಪ್ಪಿಕೊಂಡರಲ್ಲದೇ ತಮ್ಮ ಎಲ್ಲ ಸಹಾಯದ ಭರವಸೆಯನ್ನು ಕೊಟ್ಟರು.

ಈಗಾಗಿ ೧೯೫೯ನೆ ಇಸವಿಯಲ್ಲಿ ಶ್ರೀಕೃಷ್ಣ ಶಿಶುವಿಹಾರದ ಪ್ರಾರಂಭೋತ್ಸವ ಕೃಷ್ಣ ದೇವಸ್ಥಾನದ ಮುಂಭಾಗದಲ್ಲಿ ನಡೆಯಿತು. ಗ್ರಾಮದ ಹಲವಾರು ಹಿರಿಯರು ಸಮಾರಂಭಕ್ಕೆ ಆಗಮಿಸಿದ್ದರು.

ಶಿಶುವಿಹಾರದ ದೈನಂದಿನ ಚಟುವಟಿಕೆಗಳು ಪ್ರಾರಂಭವಾದ ಮೇಲೆ ಶಿಶುವಿಹಾರದ ನಿರ್ವಹಣೆಯು ಕಷ್ಟ ನನ್ನ ಅನುಭವಕ್ಕೆ ಬರಲು ಪ್ರಾರಂಭವಾಯಿತು. ಶಿಶುವಿಹಾರದ ಅಧ್ಯಾಪಕಿ ರಜೆ ಹೋದಾಗ ನಾನೆ ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಬೇಕಾದ ಪ್ರಸಂಗ ಬಂತು. ಹಾಗಾಗಿ ನಾನು ವಿಧ್ಯಾರ್ಥಿಯಾಗಿದ್ದಾಗ ಓದಿದ್ದ ಕತೆಗಳನ್ನು, ಬಾಯಿಪಾಠ ಮಾಡಿದ್ದ ಕವಿತೆಗಳನ್ನು ಜ್ಞಾಪಿಸಿಕೊಂಡು ಶಿಶುವಿಹಾರದ ಮಕ್ಕಳಿಗೆ ಅವುಗಳನ್ನು ಹೇಳಲು ಪ್ರಾರಂಭಿಸಿದೆ. ಮಕ್ಕಳು ಬರುವ ಮೊದಲೆ ಆವರಣವನ್ನು ಗುಡಿಸಿ ಬಾಗಿಲು ತೆರೆದು ಸಿದ್ಧನಾಗಿರುತ್ತಿದ್ದೆ. ಆದರೆ ಕ್ರಮೇಣ ಓರ್ವ ಒಳ್ಳೆಯ ಅಧ್ಯಾಪಕಿಯ ಅಗತ್ಯವಿದೆಯೆಂದು ತೀವ್ರವಾಗಿ ಅನಿಸತೊಡಗಿತು. ಶಿಶುವಿಹಾರದ ಅಧ್ಯಾಪಕಿಯ ತರಬೇತಿಗಾಗಿ ಮೈಸೂರಿಗೆ ಯಾರನ್ನಾದರೂ ಕಳುಹಿಸಬೇಕೆಂದು ಯೋಚಿಸಿದೆ. ಅಥವಾ ತರಬೇತಿಯಾದ ಅಧ್ಯಾಪಕಿಯನ್ನು ಕರೆದುಕೊಂಡು ಬರಬೇಕೆಂದು ಆಲೋಚಿಸಿದೆ. ಆದರೆ ಇವೆರಡು ಅಸಾಧ್ಯವಾದ ವಿಚಾರವಾಯಿತು. ಆಗ ನನ್ನ ಈ ತೊಂದರೆಯನ್ನು ಶ್ರೀಮತಿ ನಾಗಮ್ಮನವರ ಮುಂದೆ ಪ್ರಸ್ತಾಪಿಸಿದಾಗ ಅವರು ಕೃಷ್ಣರಾಜಪೇಟೆಯಿಂದ ತಮ್ಮ ಶಿಷ್ಯೆ ಗಿರಿಜಳನ್ನು ಕೆಲವು ದಿನಗಳ ಮಟ್ಟಿಗೆ ಕರೆಸಿಕೊಂಡು ಈಗ ಶಿಶುವಿಹಾರದಲ್ಲಿ ಕೆಲಸ

ಮಾಡುತ್ತಿರುವ ಅಧ್ಯಾಪಕಿಗೆ ಕೆಲವು ಶಿಶುಗೀತೆಗಳನ್ನು, ಆಟಗಳನ್ನು ಹೇಳಿಕೊಡುವಂತೆ ಮಾಡುವುದಾಗಿ ಹೇಳಿದರು. ಅವರ ಈ ಸಲಹೆಯನ್ನು ಸ್ವಾಗತಿಸಿದೆ ಅದರಂತೆ ಗಿರಿಜಾ ಗೊತ್ತಾದ ಒಂದು ದಿನ ಕೃಷ್ಣರಾಜಪೇಟೆಯಿಂದ ನಾಲ್ಕೈದು ದಿನಗಳ ಮಟ್ಟಿಗೆ ಬಂದಳು. ಇದೇ ಮೊದಲ ಬಾರಿಗೆ ನಾನು ಗಿರಿಜಾಳನ್ನು ನೋಡಿದ್ದು.ಅವಳು ಬಹಳ ಸಾಧಾರಣವಾದ ಬಟ್ಟೆಯನ್ನು ಧರಿಸಿದ್ದಳು ಕೈಯಲ್ಲಿ ಎರಡೆರಡು ಕಪ್ಪು ಬಳೆಗಳನ್ನು ಹಾಕಿಕೊಂಡಿದ್ದಳು ಮೂಗು ಬಟ್ಟು ಮತ್ತು ಓಲೆಗಳ ಹೊರತಾಗಿ ಯಾವ ಬೇರೆ ಆಭರಣಗಳಿರಲಿಲ್ಲ. ಹಣೆಯ ಮೇಲೆ ಅಗಲವಾದ ಕುಂಕುಮವಿದ್ದಿತು ಅಷ್ಟೇನೂ ಎತ್ತರವಲ್ಲದ ಮತ್ತು ತೆಳುವಲ್ಲದ ಶರೀರ. ಕಂಠ ಮಾತ್ರ ಅತಿ ಇಂಪಲ್ಲದಿದ್ದರೂ ಕರ್ಕಶವಂತೂ ಇರಲಿಲ್ಲ, ಓಡಾಟದಲ್ಲಿ ಬಹುಚಟುವಟಿಕೆ ಇತ್ತು. ಅವಳು ಶಿಶುವಿಹಾರದ ಅಧ್ಯಾಪಕಿಗೆ ಹಾಡುಗಳನ್ನು ಮತ್ತು ಆಟಗಳನ್ನು ಪ್ರತ್ಯಕ್ಷವಾಗಿ ಹೇಳುವುದರ ಮೂಲಕ ಮತ್ತು ತೋರಿಸುವುದರ ಮೂಲಕ ಕಲಿಸಿದಳು. ಗಿರಿಜ ಆ ಹಾಡುಗಳನ್ನು ಮತ್ತು ಆಟಗಳನ್ನು ಮಕ್ಕಳಿಗೆ ಕಲಿಸುತ್ತಿದ್ದರೆ ಮಕ್ಕಳೆಲ್ಲರು ಸಂತೋಷದಿಂದ ಭಾಗವಹಿಸುತ್ತಿದ್ದರು. ಗಿರಿಜಳ ಈ ಸಾಮರ್ಥ್ಯದಿಂದ ನಾನು ಬಹು ಸಂತೋಷಗೊಂಡೆ. ಮುಂದೆ ಇವಳನ್ನೆ ನಾನು ಮದುವೆಯಾಗಿ ಜನಪದ ಸೇವಾ ಟ್ರಸ್ಟ್ ಎಂಬ ಸಂಸ್ಥೆಯನ್ನು ಕಟ್ಟುತ್ತೇನೆಂಬ ಕಲ್ಪನೆಯೇನೊ ಇರಲಿಲ್ಲ. ಆದರೆ ೧೯೫೯ ರಲ್ಲಿ ಶಿಶುವಿಹಾರ ಪ್ರಾರಂಭ ಮಾಡಿದಾಗ ಯಾವ ಉತ್ಸಾಹ ಮತ್ತು ಮಕ್ಕಳ ಮೇಲಿನ ಪ್ರೀತಿಯಿಂದ ಹಾಡನ್ನು ಹೇಳುತ್ತಿದ್ದಳೊ ಅದೇ ಉತ್ಸಾಹ ಮತ್ತು ಪ್ರೀತಿಯಿಂದ ಈಗ್ಗೆ ೪೫ ವರ್ಷಗಳ ನಂತರವೂ ನಡೆಯುತ್ತಿರುವ ಅದೇ ಶಿಶುವಿಹಾರದಲ್ಲಿ ಗಿರಿಜಳು ಹೇಳುತ್ತಿರುವುದು ಮಾತ್ರ ಜೀವನದ ಅದ್ಭುತವಾದ ಸಂಗತಿಯೆ ಸರಿ.

ಮುಂದುವರಿಯುತ್ತದೆ........

# ಜನಪದ ಸೇವಾ ಟ್ರಸ್ಟಿನ ಅಂಗಳ



ನೂರಾರು ಅಭಿಮಾನಿದಾನಿಗಳ ಸಹಾಯದ ಕಾರಣದಿಂದಾಗಿಯೆ ಜನಪದ ಸೇವಾ ಟ್ರಸ್ಟ್ ಕಳೆದ ನಲವತ್ತೈದು ವರ್ಷಗಳಿಂದ ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಸರ್ವೋದಯ ವಿಚಾರದ ಆಧಾರದ ಮೇಲೆ ರಚನಾತ್ಮಕ ಕಾರ್ಯವನ್ನು ನಡೆಸಿಕೊಂಡುಬರಲು ಸಾಧ್ಯವಾಗಿದೆ. ಕಾರಣೀಭೂತರಾದ ಇಂಥ ದಾನಿಗಳಿಗೂ, ಸಮಾಜಕ್ಕೂ ಟ್ರಸ್ಟಿನ ಅಂಗಳದಲ್ಲಿ ನಡೆಯುವ ಕಾರ್ಯಕಲಾಪಗಳ ಬಗ್ಗೆ ತಿಳಿಸುವುದು ಅಗತ್ಯವೆಂದು ಮೊದಲಿನಿಂದಲೂ ಅನಿಸುತ್ತಿತ್ತು. ಇತ್ತೀಚೆಗೆ ಟ್ರಸ್ಟಿನ ಅಭಿಮಾನಿಗಳಲ್ಲೊಬ್ಬರಾದ ಶ್ರೀ.ಕೆ.ಆರ್. ಮೋಹನ್‌ರವರು ದೂರವಾಣಿಯ ಮೂಲಕ ಈ ವಿಷಯವನ್ನು ಪ್ರಸ್ತಾಪಿಸಿ ಒತ್ತಾಸೆ ನೀಡಿದುದರ ಫಲವಾಗಿ ಬಹುದಿನಗಳ ಆ ಅನಿಸಿಕೆ ಈಗ ಕಾರ್ಯರೂಪಕ್ಕೆ ಬರುತ್ತಿದೆ. ಜನಪದ ವಿಚಾರ ತನ್ನ ಐದು ವರ್ಷಗಳ ಆಯುಷ್ಯವನ್ನು ಕಳೆದು ಆರನೆ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಸಂದರ್ಭದಲ್ಲಿ ಈ ಹೊಸ ಅಂಕಣವನ್ನು ಪ್ರಾರಂಭಿಸಬೇಕೆಂಬ ಇಚ್ಛೆಯೂ ಸಹ ನೆರವೇರುತ್ತಿದೆ ಆದ್ದರಿಂದ ಜನಪದ ವಿಚಾರದ ಸಲಹಾಸಮಿತಿಯ ಸದಸ್ಯರಿಗೆಲ್ಲ ಸಂತೋಷವೆನಿಸುತ್ತದೆ.

ಪ್ರೀತಿ. ಇದು ಕರುಣಾಗೃಹದ ಅಂಗವಿಕಲ ಬಾಲಕಿಯ ಹೆಸರು. ಓರ್ವ ದೂರದ ಸಂಬಂಧಿ ಬಡ ಅಜ್ಜಿಯಲ್ಲದೆ ಬೇರೆ ಇನ್ನು ಯಾರೂ ಆಪ್ತರಿಲ್ಲದ ಹುಡುಗಿ, ಜೊತೆಗೆ ತನ್ನ ಎರಡು ಕಾಲುಗಳಲ್ಲಿಯ ಸ್ವಾಧೀನತೆಯನ್ನು ಕಳೆದುಕೊಂಡ ನತದೃಷ್ಟೆ. ಇವಳು ಟ್ರಸ್ಟಿನಲ್ಲಿ ಪ್ರಾಥಮಿಕ ಒಂದನೆ ತರಗತಿಯಿಂದ ಓದುತ್ತಾ ಕೊನೆಯಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆಹೊಂದಿದಳು. ಅವಳ ಮುಂದಿನ ವಿದ್ಯಾಭ್ಯಾಸಕೆಂದು ಮೈಸೂರಿನಲ್ಲಿರುವ ಜೆ.ಎಸ್.ಎಸ್. ಸಂಸ್ಥೆಯ ಅಂಗವಿಕಲರ ತಾಂತ್ರಿಕ ಕಾಲೇಜಿಗೆ ಸೇರಿಸಲಾಗಿದೆ. ಅವಳು ಅಲ್ಲಿ ಕಂಪ್ಯೂಟರ್ ವಿಜ್ಞಾನವನ್ನು ಅಭ್ಯಾಸಿಸುತ್ತಿದ್ದಾಳೆ ಅವಳ ವಿದ್ಯಾಭ್ಯಾಸಕ್ಕೆ ಅಗತ್ಯವಾದ ಎಲ್ಲ ನೆರವನ್ನು ಟ್ರಸ್ಟ್ ನೀಡುತ್ತಿದೆ. ಪ್ರೀತಿ ಬಾಲಕಿಯಾಗಿದ್ದಾಗ ಅವಳ ಕಾಲುಗಳ ಶಸ್ತ್ರ ಚಿಕಿತ್ಸೆಯನ್ನು

ಮಾಡಿಸಲಾಗಿತ್ತು.

ಅಂಗವಿಕಲ ಮಕ್ಕಳ ವಿಕಲತೆಯನ್ನು ಸರಿಪಡಿಸಿ ಅವರು ಹೆಚ್ಚು ಸಬಲರಾಗುವಂತೆ ಮಾಡುವ ಪ್ರಯತ್ನ ಯಾವಾಗಲೂ ಟ್ರಸ್ಟಿನದ್ದಾಗಿದೆ. ಈ ಪ್ರಯತ್ನದ ಅಂಗವಾಗಿ ಹಲವಾರು ಅಂಗವಿಕಲರು ಈಗ ನಡೆಯಬಲ್ಲವರಾಗಿದ್ದಾರೆ ಇಂಥ ಒಂದು ಪ್ರಯತ್ನ ಇತ್ತೀಚಿಗೆ ನಡೆಯಿತು.


ರಾಮಲಿಂಗೇಶ್ವರ ೧೦ ವರ್ಷದ ಬಾಲಕ ಅವನ ಬಲಗಾಲು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಮಡಚಿಕೊಂಡಿತ್ತು. ಒಂದು ಕೋಲಿನ ಸಹಾಯದಿಂದ ನಡೆಯುತ್ತಿದ್ದ. ಈಗ ಅವನಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿಸುವುದರ ಮೂಲಕ ಮಡಚಿಕೊಂಡಿದ್ದ ಆ ಬಲಗಾಲನ್ನು ನೇರಗೊಳಿಸಲಾಗಿದೆ. ಆ ಕಾಲಿಗೆ ಕ್ಯಾಲಿಪರ್ಸ್ ಹಾಕಿಕೊಂಡು ಊರುಗೋಲುಗಳ ಸಹಾಯದಿಂದ ನಡೆಯಬಲ್ಲವನಾಗಿದ್ದಾನೆ.

ಮುಂದುವರಿಯುವುದು....

**ಸನ್ಮಾನ್ಯರಿಂದ**

ಜುಲೈ ಮಾಹೆಯ ಜನಪದ ವಿಚಾರ ಹಲವಾರು ಉತ್ತಮ ಲೇಖನಗಳಿಂದ ಸಂಗ್ರಹಯೋಗ್ಯವಾಗಿದೆ. ಪತ್ರಿಕೆಗೆ ಎಲ್ಲ ಶುಭ ಹಾರೈಸುತ್ತೇನೆ.

–ಬಿಸಪ್ಪಗೌಡ ಕೋಲಾರ



## ಶ್ರದ್ಧಾಂಜಲಿ

ಪ್ರಿಯ ಅಕ್ಷರ ಅವರಿಗೆ,

ನಿಮ್ಮ ತಂದೆ ಸುಬ್ಬಣ್ಣನವರು ತೀರಿಕೊಂಡ ವಾರ್ತೆಯನ್ನು ತಿಳಿದು ನಾವೆಲ್ಲ ಆಘಾತಕ್ಕೊಳಗಾದೆವು. ಆ ಆಘಾತದಿಂದ ಚೇತರಿಸಿಕೊಳ್ಳಲು ಬಹಳ ಸಮಯವೇ ಬೇಕಾಯಿತು. ಆ ದಿನವೆಲ್ಲ ಶೂನ್ಯವಾಗಿತ್ತು. ಸುಬ್ಬಣ್ಣನವರ ನಿಧನಕ್ಕೆ ಕರ್ನಾಟಕವೇ ದುಃಖದಲ್ಲಿ ಮುಳುಗಿದೆ. ಸ್ವದೇಶದಲ್ಲಿದ್ದುಕೊಂಡೆ ಮೂರು ಲೋಕಗಳನ್ನು ದೃಷ್ಟಿಯಲ್ಲಿರಿಸಿಕೊಂಡಿದ್ದ ಅಪರೂಪದ ವ್ಯಕ್ತಿ ನಿಮ್ಮ ತಂದೆ ಸುಬ್ಬಣ್ಣನವರು. ಅವರನ್ನು ಇತ್ತೀಚೆಗೆ ಎರಡುಸಲ ಭೇಟಿಮಾಡಿ ಅವರೊಂದಿಗೆ ಸ್ವಲ್ಪ ಸಮಯವನ್ನು ಕಳೆದದ್ದು ಮತ್ತು ಅವರೊಂದಿಗೆ ಮಾತನಾಡಿದ್ದು ನನ್ನ ಸೌಭಾಗ್ಯವೆಂದೆ ಭಾವಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಮಸ್ತ ಕನ್ನಡಿಗರಲ್ಲಿ ನಾನೂ ಕೂಡ ಒಬ್ಬ. ತಂದೆಯ ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಶಕ್ತಿಯನ್ನು ದೇವರು ನಿಮಗೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

೨೩-೦೭-೨೦೦೫ —ಸುರೇಂದ್ರ ಕೌಲಗಿ

## ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯುಗಳಿಗೆ ಸಂಬಂಧಿ ಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯುಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು

*ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ*

*(-ಸಂಪಾದಕರು)*

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

***jANAPADA VICHARA*** - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com